ಅಪರಂಜಿ

ಜೂನ್ 2006

ತಿಳಿನಗೆಯ ಕಾರಂಜಿ



ಪ್ರಕಾಶ್

ಶಿವು

ಬಾಗೂರು ಚಂದ್ರು

ಲಾಂಗುಲಾಚಾರ್ಯ

ಕು.ಕ.

ವಿಕ್ರಮ ಕವಲಿ

ಶ್ಯಾಮಲಾ ರವಿಶಂಕರ್

ಧೃತಿ

ನಾಗೂಶ್ರೀ ಸೂರಿ

ಎನ್. ರಾಮನಾಥ್

ಶಂಸ

ಎಚ್. ಗೋಪಾಲಕೃಷ್ಣ

ಪ್ರಭಾ

ದಂನಆ

ಬಿಡಿ ಪ್ರತಿ: ರೂ. 10.00

ಅಪರಂಜಿ

ತಿಳಿನಗೆಯ ಕಾರಂಜಿ



ಚಂದಾ ವಿವರ:
ಬಿಡಿ ಪ್ರತಿ: ರೂ. 10/-
ವಾರ್ಷಿಕ ಚಂದಾ: ರೂ. 100/-
ಹತ್ತು ವರ್ಷದ ಚಂದಾ: ರೂ. 750/-
ಕೆಲಸದ ವೇಳೆ:
ಬೆಳಿಗ್ಗೆ 8 ರಿಂದ 10 ಗಂಟೆಯವರೆಗೆ
ಮುದ್ರಣ: ರವಿ ಗ್ರಾಫಿಕ್ಸ್
ಅಕ್ಷರಜೋಡಣೆ:
ಒಮೇಗಾ ಲೇಸರ್ ಟೆಕ್



ಈ ಸಂಚಿಕೆಯಲ್ಲಿ .....

ಸಂಪುಟ 23 ಸಂಚಿಕೆ - 9
ಜೂನ್ - 2006

ಪ್ರಕಾಶಕರು: ಕೊರವಂಜಿ ಅಪರಂಜಿ ಟ್ರಸ್ಟ್, 36, 6ನೇ ಮುಖ್ಯರಸ್ತೆ, ಮಲ್ಲೇಶ್ವರಂ,
ಬೆಂಗಳೂರು - 560 003 ದೂರವಾಣಿ: 080 - 23345259
email: aparanji@hotmail.com website: aparanjimag.com

ಸಂಪರ್ಕ ವಿಳಾಸ: ಶ್ರೀ ಬೇಲೂರು ರಾಮಮೂರ್ತಿ, ಉಪ ಸಂಪಾದಕರು, ಅಪರಂಜಿ ಮಾಸಪತ್ರಿಕೆ,
ನಂ. 96, 'ಸುಕೇಶವ' ಎರಡನೇ ಅಡ್ಡರಸ್ತೆ, 20ನೇ ಮುಖ್ಯರಸ್ತೆ, ಮೊದಲನೇ ಫೇಸ್,
ಬಿ.ಟಿ.ಎಂ. ಲೇಔಟ್, ಬೆಂಗಳೂರು - 560 068. ದೂರವಾಣಿ: 26688488

ಶುಭಾಶಯಗಳೊಂದಿಗೆ

ಪ್ರಭಾ ಕಣ್ಣಿನ ಆಸ್ಪತ್ರೆ

ಮತ್ತು

ಸಂಶೋಧನಾ ಕೇಂದ್ರ

504, 40ನೇ ಅಡ್ಡರಸ್ತೆ, 7ನೇ ಬ್ಲಾಕ್,
ಜಯನಗರ, ಬೆಂಗಳೂರು - 560 070
ದೂರವಾಣಿ: 2634 4131, 41 / 2663 7041

ಮತ್ತು

ವಿಠಲ ಅಂತರರಾಷ್ಟ್ರೀಯ ನೇತ್ರಶಾಸ್ತ್ರ ಸಂಸ್ಥೆ

ನಂ. 1, 2ನೇ ಅಡ್ಡರಸ್ತೆ, 2ನೇ ಮುಖ್ಯರಸ್ತೆ,
7ನೇ ಬ್ಲಾಕ್, ಬನಶಂಕರಿ 3ನೇ ಹಂತ,
ಹೊಸಕೆರೆಹಳ್ಳಿ, ಬೆಂಗಳೂರು - 560 085
ದೂರವಾಣಿ: 2672 2213/14/15/19



○ ಪ್ರಕಾಶ್

ಕಾವ್ಯ ವಿಶ್ವನಾಥನ್ ಕೃತಿ ಚೌರ್ಯ

- ಸುದ್ದಿ

ಹಾರುವ ವರ್ಡ್ ಅಂದರೆ ಇದೇ ಏನೋ?!

★★★

ಟೆಂಡೂಲ್ಕರ್ ಅವರಿಂದ ಸರ್ಪಸಂಸ್ಕಾರ ಸೇವೆ

- ಸುದ್ದಿ

ಇನ್ನು ಅವರಿಗೆ ಸ್ಪಿನ್ ಭಯವಿಲ್ಲ

★★★

ಸರ್ಕಾರಿ ಆಸ್ಪತ್ರೆಗಳಿಗೆ ವೈದ್ಯರ ವಾಪಸಾತಿ

- ಪತ್ರಿಕೆ

ರೋಗಿಗಳೂ ಬಂದರೆ ಒಳಿತು

★★★

ಭಾರತ-ವೆಸ್ಟ್ ಇಂಡೀಸ್ ಡಿ.ಡಿ. ಪ್ರಸಾರಕ್ಕೆ ತಡೆ

- ಸುದ್ದಿ

ಈ ಆಟ ಶುರುವಾದಂತಿದೆ

★★★

ರಾಜ್ ಸ್ಮಾರಕ ಕನ್ನಡ ವಾಕ್ಯ ಸ್ಪರ್ಧೆ

- ಸುದ್ದಿ

ಬೆಂಗಳೂರಿನಲ್ಲಿ ತರುಣರು what is walk ya ಅಂದರಂತೆ

★★★

ಬಿ.ಜೆ.ಪಿ. ಅಂತಃ ಕಲಹ ಶಮನ ಯತ್ನ

- ಪತ್ರಿಕೆ

ಭಾರತೀಯ ಜಗಳ ಪಾರ್ಟಿ ಎಂದು ಅಪರಂಜಿ ನಕ್ಕಳಂತೆ.

★★★

ಭಾರತೀಯ ವಾಯುಪಡೆ ಸೇರಲು ಲಲನೆಯರ ದೌಡು.

- ಸುದ್ದಿ

ಪಾಕೀಸ್ಥಾನದ ಪಡ್ಡೆಯುವಕರು ಚಕಿತರಾದರಂತೆ.


★★★

ಇಂದು ವಿಂಡೀಸ್ ಗೆ ದ್ರಾವಿಡ್ ಪಡೆ

- ಕ್ರೀಡಾ ಸುದ್ದಿ.

ಜಯಭೇರಿ ಹೊಡೆಯಲು ಅಪರಂಜಿ ಸಿದ್ಧಳಾಗುತ್ತಿದ್ದಾಳೆ.

★★★



ರಿಸರ್ವೇಷನ್, ರಿಸರ್ವೇಷನ್.

- ಶಿವು

ಶೃಂಗ ಸಭೆ

ಆ ಶೃಂಗಸಭೆಗೆ ಅದು ಬಹು ಪ್ರಶಸ್ತವಾದ ದಿನ. ವೇಳೆಯೂ ಅಷ್ಟೇ ಸೂಕ್ತವಾಗಿತ್ತು. ಆಷಾಢ ಬಹುಳ ಅಮಾವಸ್ಯೆ ಮಧ್ಯರಾತ್ರಿ ಹನ್ನೆರಡು ಘಂಟೆಯ ಸಮಯಕ್ಕೆ ಸರಿಯಾಗಿ ಊರಾಚೆಯ ಹುಣಸೇಮರದ ಸುತ್ತ ಭೂತ ಪ್ರೇತ ನೇತಾರರೆಲ್ಲರೂ ನೆರೆದಿದ್ದರು. ಬ್ರಹ್ಮ ರಾಕ್ಷಸ, ಜಡೆಮುನಿ, ಕೊಳ್ಳಿದೆವ್ವ, ಮೋಹಿನಿ, ಶಾಕಿನಿ ಡಾಕಿಣಿಯರೇ ಮೊದಲಾಗಿ ದೆವ್ವಸಂಕುಲದ ಎಲ್ಲ ಜಾತಿ, ವರ್ಗಗಳ ಪ್ರತಿನಿಧಿಗಳನ್ನೂ ಅಲ್ಲಿ ಕಾಣಬಹುದಾಗಿತ್ತು.

ಸದಾ ಹ್ಹ ಹ್ಹ ಹ್ಹಾ ಎಂದು ನಗುವ ಮೋಹಿನಿಯರೂ ಅಂದು ಸಂದರ್ಭದ ಘನತೆಗೆ ತಕ್ಕಂತೆ ಗಂಭೀರವಾಗಿದ್ದುದೇ ಆ ಸಭೆಯ ಮಹತ್ವವನ್ನು

ಸೂಚಿಸುತ್ತಿತ್ತು. ಸಭೆಯ ಅಧ್ಯಕ್ಷರಾದ ಜಡೆಮುನಿಯವರು ಕಲಾಪಗಳನ್ನು ಪ್ರಾರಂಭಿಸುತ್ತಾ, 'ಪ್ರೇತ ಬಾಂಧವರೇ, ಇಂದಿನ ಸಭೆಯ ಮಹತ್ವವನ್ನು ವಿವರಿಸುವ ಅಗತ್ಯವೇ ಇಲ್ಲ. ನಮ್ಮ ಸಂಕುಲದ ಮುಂದುವರಿದ ವರ್ಗಗಳು, ಅವರನ್ನು ಹೆಸರಿಸುವ ಅಗತ್ಯ ಇಲ್ಲ ಅಂತ ನನಗನ್ನಿಸುತ್ತದೆ, (ಸಭೆಯಲ್ಲಿ ನರ್ವಸ್ ಲಾಫ್ಟರ್) ಈ ಮಹಾನಗರಿಯ ಎಲ್ಲ ಆಯಕಟ್ಟಿನ ಪಾಳು ಮನೆಗಳನ್ನೂ ಆಕ್ರಮಿಸಿಕೊಂಡು ಬಿಟ್ಟಿದ್ದು, ಮಿಕ್ಕ ದುರ್ಬಲವರ್ಗದವರಿಗೆ ಮನೆಗಳೇ ಇಲ್ಲದಂತಾಗಿದೆ. ಕೇವಲ ಎರಡು ದಶಕಗಳ ಹಿಂದೆ ಸಣ್ಣದಾಗಿ ಪ್ರಾರಂಭವಾದ ಈ ಸಮಸ್ಯೆ ಈಗ ಬೃಹದ್ರೂಪ ತಾಳಿದೆ. ಈ ಸಮಸ್ಯಗೆ ಈಗಳೀಗಳೇ ಪರಿಹಾರ ದೊರಕದಿದ್ದರೆ, ಸಾಮಾಜಿಕ ನ್ಯಾಯ ಎಂಬ ಪದಸಮುಚ್ಛಯದ ಅರ್ಥ ಉಳಿಯುವುದಾದರೂ ಹೇಗೆ? ಈ ಕುರಿತು ಗಂಭೀರ ಚರ್ಚೆ ನಡೆಯಲೆಂದು ನನ್ನ ಆಶೆ.' ಎಂದು ತನ್ನ ಪುಟ್ಟ ಭಾಷಣವನ್ನು ಮುಗಿಸಿ ಕೊಂಬೆ ಹತ್ತಿ ಕುಳಿತರು.

ಸ್ವಲ್ಪಕಾಲ ಮಾತನಾಡಲು ಯಾರೂ ಮುಂದೆ ಬರಲಿಲ್ಲ. ಆಮೇಲೆ ದಕ್ಷಿಣಕನ್ನಡದ ಬೊಬ್ಬರ್ಯನವರು ಎದ್ದು ನಿಂತರು.

'ಇದೆಲ್ಲಾ ಎಂಥದು ಮಾರಾಯ್ರೇ, ಕೇವಲ ಮಾತಿನಿಂದ ಪರಿಹಾರ ದೊರಕುವುದು ಎಂಬುದು ಸುಳ್ಳು. ಶೇಕಡ ಇಪ್ಪತ್ತೇಳು ಪಾಳುಬಿದ್ದ ಮನೆಗಳಿಂದ ಅಲ್ಲಿ ಠಿಕಾಣಿ ಹಾಕಿರುವ ಘಟ್ಟದ ಮೇಲಿನ ದೆವ್ವಗಳನ್ನು ಉಚ್ಚಾಟನೆ ಮಾಡಿ. ಆ ಮನೆಗಳನ್ನು ನಮ್ಮ ದುರ್ಬಲವರ್ಗದವರಿಗೆ ಕೊಡಿಸಿ ಇದಕ್ಕೆಲ್ಲಾ ಯಾಕೆ ಮಂಡೆ ಬಿಸಿ?'

ಈ ಮಾತನ್ನು ಕೇಳಿದ ತಕ್ಷಣ ಬ್ರಹ್ಮ ರಾಕ್ಷಸರು ತಮ್ಮ ಜನಿವಾರವನ್ನು ನೀವಿಕೊಳ್ಳುತ್ತಾ, 'ಮಾನ್ಯ ಬೊಬ್ಬರ್ಯನವರು ಹೇಳಿದ್ದು ಸಾಧುವೇ. ಆದರೆ ನಾವು ಇಲ್ಲಿ ನೆರೆದಿರುವುದು ಮನೆಗಳ ಸಮಸ್ಯೆಯನ್ನು ಪರಿಹರಿಸಲಿಕ್ಕೆ. ಅದನ್ನು ಉಲ್ಬಣಗೊಳಿಸುವುದಕ್ಕಲ್ಲ. (ಸಭೆಯ ಒಂದು ಪಾರ್ಶ್ವದಿಂದ ಕರತಾಡನ). ಒಬ್ಬರನ್ನು ಓಡಿಸಿ ಇನ್ನೊಬ್ಬರನ್ನು ಅಲ್ಲಿ ಕೂರಿಸಿದರೆ ಅದು ಸಮಸ್ಯೆಯ ಪರಿಹಾರವೇ?. ಎಲ್ಲರೂ ಸ್ವಲ್ಪ ಸಾವಧಾನದಿಂದ ಆಲೋಚನೆ ಮಾಡಿ 'ಎಂದು ಹೇಳಿ ಮೇಲಿನ ಕೊಂಬೆಗಳು ಕಿಕ್ಕಿರಿದುದ್ದರಿಂದ ಕೆಳಗೆ ಹರಡಿದ್ದ ಬೇರೊಂದರ ಮೇಲೆ ಕುಳಿತರು.

ಸುಮಾರು ಒಂದು ಘಂಟೆಯ ಕಾಲ ಹುರುಳಿಲ್ಲದ ವಾಗ್ವಾದಗಳಾದವು. ಎಲ್ಲರೂ ತಮ್ಮ ಹಳೆಯ ನಿಲುವುಗಳನ್ನೇ ಪ್ರತಿಪಾದಿಸಿದರು. 'ಪುಟ್ಟದೆವ್ವಗಳಿಗೆ ಚಿಕ್ಕವಯಸ್ಸಿನಿಂದಲೇ ಪಾಳುಮನೆ ಆಕ್ರಮಿಸಿಕೊಳ್ಳುವ ವಿಧಾನವನ್ನು ಹೇಳಿಕೊಡಿ. ಇನ್ನು ಇಪ್ಪತ್ತು ವರ್ಷಗಳಲ್ಲಿ ಯಾರಿಗೂ ಈ ಸಮಸ್ಯೆ ಇರುವುದಿಲ್ಲ.' ಎಂಬ ವಾದದಿಂದ ಹಿಡಿದು 'ಮುಂದುವರಿದ ದೆವ್ವಗಳನ್ನು ಸಾರಸಗಟು ಕೊಂದುಬಿಡಿ' ಎಂಬ ಅಸಾಧ್ಯ ಪರಿಹಾರಗಳು ಗಾಳಿಯಲ್ಲಿ ಹಾರಾಡಿದವು. ಕೊನೆಗೆ ಮಾನ್ಯ ಜಡೆಮುನಿಯವರೇ ಎದ್ದುನಿಂತು ಸಭೆಯಲ್ಲಿನ ಗಲಭೆಯನ್ನು ನಿಲ್ಲಿಸಬೇಕಾಯಿತು. 'ಮಾನ್ಯ ಸಭಾಸದರೇ, ಏನಿದು ಲೋಕಸಭೆಗೂ ಕೀಳಾಯ್ತೇ ನಮ್ಮ ಕಲಾಪ. ಇದು ಖಂಡಿಕ ಸಲ್ಲ. ಈ ಸಮಸ್ಯೆಯ ಪರಿಹಾರಕ್ಕೆ ನಮ್ಮ ಹಳೆಯ ಮಿದಿಳುಗಳು ಏನೇನೂ ಸಾಲವು. ಈಗ ಐಟಿ ಯುಗ. ಭೂಲೋಕದಲ್ಲೇ ಐಟಿಸಿಟಿ ಎಂದು ಹೆಸರುಪಡೆದ ಬೆಂಗಳೂರಿನಲ್ಲಿ ಪ್ರಹ್ಲಾದರಾವ್ ಎಂಬ ಸಮಾಲೋಚನೆಗಾನಿದ್ದಾನಂತೆ. ನಾಳೆಯೇ ಅವನನ್ನು ಕಂಡು ಸಮಾಲೋಚಿಸಿ ಒಂದು ಪರಿಹಾರವನ್ನು ಪಡೆಯುವೆ. ನನಗೆ ಈ ಜವಾಬ್ದಾರಿಯನ್ನು ಈ ಸಭೆ ನೀಡಬೇಕೆಂದು ನನ್ನ ಸವಿನಯ ಪ್ರಾರ್ಥನೆ'

ಸಭೆ ಒಕ್ಕೊರಲಿನಿಂದ ಈ ಸಲಹೆಯನ್ನು ಅನುಮೋದಿಸಿತು.

ಸಮಾಲೋಚನೆ

ಡಾ. ಪ್ರಹ್ಲಾದ್ ನ ಸಮಾಲೋಚನಾ ಕಛೇರಿ ಎಲೆಕ್ಟ್ರಾನಿಕ್ ಸಿಟಿಯಲ್ಲಾ ಅತ್ಯಂತ ಭವ್ಯವಾಗಿ ಸುಸಜ್ಜಿತವಾಗಿ ಅಲಂಕರಿಸಲ್ಪಟ್ಟ ಕನ್ಸಲ್ಟಿಂಗ್ ಛೇಂಬರ್ಸ್. ಪ್ರಹ್ಲಾದರಾಯರ ಸ್ಟಾಫ್ ರಿಕ್ರೂಟ್‌ಮೆಂಟ್ ವಿಧಾನವೇ ಮೋಜಿನದು. ಫೆಮಿನಾ ಮಿಸ್ ಇಂಡಿಯಾ ಸ್ಪರ್ಧೆಗಳಲ್ಲಿ ಸ್ಪರ್ಧಿಸಿ ಸೋತ ಎಲ್ಲಾ ಯುವತಿಯರನ್ನೂ ಕಲೆಹಾಕಿ ಅವರು ಕೇಳಿದ ಕಾಂಪೆನ್ಸೇಷನ್ ಕೊಟ್ಟು ನೇಮಿಸಿಕೊಂಡು ಅವರಿಗೆ ವಿಶಿಷ್ಟ ತರಬೇತಿ ಕೊಟ್ಟು ಅನಂತರ ಕಛೇರಿಯ ವಿವಿಧ ಕೊಠಡಿಗಳ ಡಿಕೋರ್ ಗೆ ತಕ್ಕಂತೆ ಅವರುಗಳನ್ನು ಬೇರೆ ಬೇರೆ ಕಡೆ ಪ್ರತಿಷ್ಠಾಪಿಸಿ, ಬಂದ ಗ್ರಾಹಕರ ಕಣ್ಣು ಕುಕ್ಕುವಂತೆ ಮಾಡುತ್ತಿದ್ದ ಪ್ರಹ್ಲಾದ್. ಈ ವಿಧಾನಕ್ಕೆ ಅವರು ಕೊಡುತ್ತಿದ್ದ ಕಾರಣಗಳೇ ವಿಚಿತ್ರ. 'ಪ್ರತಿಯೊಬ್ಬ ಸುಂದರ ತರುಣಿಯ ಸುತ್ತ ಒಂದು ಟ್ರಾನ್ಕ್ವಿಲಿಟಿ ಆರಾ ಇರುತ್ತೆ. ತರುಣಿಯರ ಸಂಖ್ಯೆ ಹೆಚ್ಚಾದಷ್ಟೂ ಆಂಬಿಯನ್ಸ್ ನಲ್ಲಿ ಶಾಂತಿ ಸಮಾಧಾನ ಹೆಚ್ಚುತ್ತೆ. ನಮ್ಮ ಗ್ರಾಹಕರಿಗೆ ಇದು ಅಗತ್ಯ' ಎನ್ನುತ್ತಿದ್ದ ಪ್ರಹ್ಲಾದ್.

ಆ ದಿನ ಬೆಳಗ್ಗೆ ಮೇಜಿನ ಮೇಲೆ ಪೇಪರ್ ಹರಡಿಕೊಂಡು ಟೀ ಕುಡಿಯುತ್ತಾ ಪ್ರಹ್ಲಾದ್ ಕೂತಿದ್ದ. ಒಮ್ಮೆಲೇ ಕರೆಗಂಟೆ ಟ್ರಿನ್ ಗುಟ್ಟಿತು. ರಿಸೆಪ್ಷನಿಸ್ಟ್ ಮೀರಾ, ಆ ತುದಿಯಿಂದ 'ಪ್ರಹ್ಲಾದ್, (ಬಾಸನ್ನು ಹೆಸರಿನಿಂದಲೇ ಕರೆಯುವುದು ಆ ಕಛೇರಿಯ ಸುತ್ತ್ಯ ಸಂಸ್ಕೃತಿ) ಇಲ್ಲಿ ಯಾರೋ ನಿನ್ನ (ಏಕವಚನ ಸಹಾ) ನೋಡುಕ್ಕೆ ಬಂದಿದಾರೆ. ಹತ್ತಾರು ಎಣ್ಣೆಗಾಣದ ಜಡೆಗಳು, ಕೆಂಗಣ್ಣು, ಕೋರೆ ದಾಡೆ, ಪಂಚೆ, ಖಂಡಿತ ವಾಣಿಜ್ಯಗ್ರಾಹಕನಾಗಿರಲು ಸಾಧ್ಯವೇ ಇಲ್ಲ. ನೀನಿಲ್ಲ ಎಂದು ಹೇಳಿ ಕಳಿಸಿಬಿಡಲೇ?' ಎಂದು ತನ್ನ ಕೋಕಿಲಕಂಠದಲ್ಲಿ ಉಲಿದಳು.

ಪ್ರಹ್ಲಾದನ ಆಂಟೆನಾ ಎಂದಿಗೂ ಬಲು ಚುರುಕು. ಇದು ಯಾರೋ ಗಾಡ್‌ಮನ್ ಆಗಿದ್ದರೂ ಆಗಿರಬಹುದು. ಇವನನ್ನು ಮುಂದಿಟ್ಟುಕೊಂಡು ಕೋಟಿಗಟ್ಟಲೆ ದುಡಿಯಬಹುದು. ಉದ್ದಗೂದಲು, ಪಂಚೆ ಸರ್ವೇಸಾಮಾನ್ಯವಾದರೂ, ಕೆಂಗಣ್ಣು

ಕೋರೆದಾಡೆ ನಾವೆಲ್ ಫೀಚರ್ಸು. ನಾನೇ ಹೋಗಿ ಇದಿರುಗೊಳ್ಳೋದು ವಾಸಿ ಎಂದೆಲ್ಲಾ ಆಲೋಚಿಸಿ 'ನಾನೇ ಅಲ್ಲಿ ಬರ್ತೇನೆ ಮಿಚಿಕೋ, ಅವರನ್ನು ಗೌರವದಿಂದ ಮಾತನಾಡಿಸಿ ಕೂರಿಸಿಕೊಂಡಿರು' ಎಂದು ಹೇಳಿ ಕಛೇರಿಯ ಹೊರಾಂಗಣದತ್ತ ಹೊರಟ.

ಅಂದಹಾಗೆ ಪ್ರಹ್ಲಾದನಿಗೆ ಜಪಾನೀ ತರುಣಿಯರೆಂದರೆ ಬಲು ಅಚ್ಚುಮೆಚ್ಚು. ಹಾಗಾಗಿ ತನ್ನ ಸಿಬ್ಬಂದಿ ವರ್ಗದವರಿಗೆಲ್ಲಾ ಜಪಾನೀ ಅಡ್ಡಹೆಸರುಗಳನ್ನು ಕೊಟ್ಟಿದ್ದ.

ಪ್ರಹ್ಲಾದ ಜಡೆಮುನಿಯನ್ನ ಬಹು ಮರ್ಯಾದೆಯಿಂದ ತನ್ನ ಆಫೀಸಿಗೆ ಬರಮಾಡಿಕೊಂಡು ಕುಳ್ಳಿರಿಸಿ, 'ಕುಡಿಯಲು ಏನಾದರೂ ಬಿಸಿ...?' ಎಂದು ಪ್ರಶ್ನಾರ್ಥಕವಾಗಿ ನೋಡಿದ. ಜಡೆಮುನಿಯ ರಕ್ತ ಎಂಬ ಉತ್ತರ ಪ್ರಹ್ಲಾದನನ್ನು ಸ್ವಲ್ಪವೂ ವಿಚಲಿತಗೊಳಿಸಲಿಲ್ಲ. 'ಕ್ಷಮಿಸಿ ಬ್ಲಡ್‌ಬ್ಯಾಂಕ್ ಇಲ್ಲಿಗೆ ಸ್ವಲ್ಪ ದೂರವೇ ಆಯಿತು. ಬ್ಲಡಿಮೇರಿ ಆಗಬಹುದು ಎಂದು ಭಾವಿಸುವೆ.' ಎಂದು ಹೇಳಿ 'ಈಗ ಹೇಳಿ ಈ ಸೇವಕನಿಂದ ತಮಗೆ ಸಲ್ಲಬಹುದಾದ ಸೇವೆಯಾದರೂ ಏನಿರಬಹುದು?' ಎಂದು ಸವಿನಯದಿಂದ ನುಡಿದ.

ಜಡೆಮುನಿ ತನ್ನ ಸಮಸ್ಯೆಯನ್ನೆಲ್ಲಾ ಸವಿಸ್ತಾರವಾಗಿ ಪ್ರತಿಪಾದಿಸಿದ. ಪ್ರೇತಲೋಕದಲ್ಲಿನ ವಸತಿಯ ಅಭಾವ, ದುರ್ಬಲವರ್ಗದ ಬವಣೆ, ನೇತಾರರ ಆತಂಕ, ಸ್ಫೋಟಗೊಳ್ಳುವ ಪರಿಸ್ಥಿತಿ ಎಲ್ಲವೂ ಜಡೆಮುನಿಯ ಭಾಷಾಪ್ರೌಢಿಮೆಯಲ್ಲಿ ಬಹು ಸ್ಪಷ್ಟವಾಗಿ ಮೂಡಿಬಂದವು. ತನ್ನ ಮಾತನ್ನು ಮುಗಿಸುತ್ತಾ, 'ನೋಡಿ ಪ್ರಹ್ಲಾದ ನೀವು ನನ್ನ ಮಗನ ಸಮಾನ ಹೇಗಾದರೂ ಮಾಡಿ ನನ್ನನ್ನು ಬಚಾಯಿಸಿ. ಸಂಭಾವನೆಯ ಬಗ್ಗೆ ಯೋಚನೆ ಬೇಡ. ತಮ್ಮ ಅಭೀಪ್ಸೆಯನ್ನು ನಡೆಸಿಕೊಡಲು ಪ್ರೇತಸಂಕುಲ ಸದಾ ಸಿದ್ಧ' ಎಂದ ನಮ್ಮ ಹಿರಣ್ಯಕಶಿಪು.

ಪರಿಹಾರ

ಪ್ರಹ್ಲಾದನ ಸಂತಸಕ್ಕೆ ಮೇರೆಯೇ ಇರಲಿಲ್ಲ. ಈ ಗ್ರಾಹಕನನ್ನು ತೃಪ್ತಿಗೊಳಿಸುವುದು ತನ್ನ ಸೌಭಾಗ್ಯ ಅಂದುಕೊಂಡು, 'ಜಡೆಮುನಿಯವರೇ, ಏನೂ ಯೋಚನೆಮಾಡಬೇಡಿ. ಈಗನಿಮ್ಮ ಸಮಸ್ಯೆಯಾದರೂ ಏನು. ಮನೆ. ಅಷ್ಟೇತಾನೆ. ನೆ ನ ನ ಮಾಡಿಬಿಡಿ. ಖಲಾಸ್. ಸಮಸ್ಯೆ ಮಂಗ ಮಾಯ.' ಎಮು ನಗುತ್ತಾ ಹೇಳಿದ.

ಜಡೆಮುನಿಗೆ ತಬ್ಬಿಬ್ಬಾದಂತಾಯಿತು. 'ನೆ ನ ನ ಮಾಡೋದೆ?' ಹಾಗಂದ್ರೇನು. ಅರ್ಥ ಆಗ್ಲಿಲ್ವಲ್ಲ ಪ್ರಹ್ಲಾದ್. ಪ್ರಹ್ಲಾದನಿಗೆ ತಾಳ್ಮೆ ಬಹಳ. ನಿಧಾನವಾಗಿ ವಿವರಿಸಿದ.

'ಜಡೆಮುನಿಯವರೇ, ನಿಮ್ಮ ಸಮಸ್ಯೆ ಮನೆ. ನಿಮ್ಮ ಕುಲಬಾಂಧವರಿಗೆ ಮನೆ ಒದಗಿಸುವುದು. ಅಷ್ಟೇ ತಾನೆ. ಮನೆ ಅನ್ನುವ ಬದಲು ಮನ ಅಂದುಬಿಡಿ. ಈಗ ನೋಡಿ ಬೆಂಗಳೂರಿನ ತುಂಬಾ ಸಾಫ್ಟ್‌ವೇರ್ ಇಂಜಿನಿಯರುಗಳು ತುಂಬಿಕೊಂಡಿರೋದು ಗೊತ್ತೇ ಇದೆ. ಸಾಫ್ಟ್‌ವೇರ್ ಇಂಜಿನಿಯರುಗಳ ಕೆಲಸ ಏನು? ಸದಾ ಕಂಪ್ಯೂಟರಿನ ಮುಂದೆ ಕೂತು ಗಣಿತದ ಅಲ್ಗೋರಿಧಮ್ ಗಳನ್ನು ಬರಿಯೋದು ತಾನೆ. ಈ ಕೆಲಸಕ್ಕೆ ಅವರು ಬಳಸೋದು ಮಿದಿಳಿನ ಎಡಭಾಗ. ದಿನಕ್ಕೆ ಹದಿನೆಂಟು ಘಂಟೆಗಳ ಕಾಲ ಎಡಮಿದಿಳನ್ನು ಬಳಸಿ, ಆರು ಘಂಟೆ ನಿದ್ದೆ ಮಾಡಿದ್ರೆ ಏನಾಗುತ್ತೆ ಹೇಳಿ?' ಎಂತ ಹೇಳಿ ಪಾಸ್ ಮಾಡಿದ ಪ್ರಹ್ಲಾದ್.

ಜಡೆಮುನಿ ಬಹಳ ಚುರುಕು

'ಬಲ ಮಿದಿಳು ಪಾಳು ಬೀಳುತ್ತೆ.'

'ಕರೆಕ್ಟ್, ಪಾಳುಬಿದ್ದ ಮನವನ್ನ ನಿಮ್ಮ ಕುಲಬಾಂಧವರು ಆಕ್ರಮಿಸಿಕೊಳ್ಳಲಿ. ಆಕ್ರಮಿಸಿಕೊಳ್ಳೋಕ್ಕೆ ಪಾಳುಬಿದ್ದ ಮನೆ ಆದ್ರೇನು, ಮನ ಆದ್ರೇನು. ಈಗ ನನ್ನ ಜೊತೆ ಬನ್ನಿ ಇಲ್ಲೇ ಹತ್ತಿರ ಇರೋ ಸಾಫ್ಟ್‌ವೇರ್ ಕಂಪನಿಗಳಿಗೆ ನಿಮ್ಮನ್ನ ಕರೆದುಕೊಂಡು ಹೋಗ್ತೀನಿ.ಖಾಲಿ ನಿವೇಶನಗಳನ್ನ ನೀವೇ ನೋಡಬಹುದು. ಅಂದಹಾಗೆ ನಿಮ್ಮನ್ನು ಆ ಕಂಪನಿ ಎಂಡಿಗೆ, ಇಥಿಯೋಪಿಯಾ ರಾಯಭಾರಿ ಅಂತ ಪರಿಚಯಿಸ್ತೇನೆ. ಅಭ್ಯಂತರ ಇಲ್ಲತಾನೆ.'

ಪ್ರಹ್ಲಾದ, ಜಡೆಮುನಿ ಇನ್ಫೋಸಿಸ್ ನ ಕಟ್ಟಡದ ಗ್ಯಾಲರಿಯಲ್ಲಿ ನಿಂತು ಕೆಳಗಿನ ವರ್ಕ್ ಏರಿಯಾದತ್ತ ವಿಹಂಗಮ ನೋಟವನ್ನು ಹರಿಸಿದ್ದರು.

ಜಡೆಮುನಿಯ ಹೃದಯ ತುಂಬಿಬಂದಿತ್ತು. ಎಲ್ಲೆಲ್ಲಿ ನೋಡಿದರೂ ಪಾಳುಬಿದ್ದ ಬಲಮಿದಿಳುಗಳು. ಅಬ್ಬ! ನಮ್ಮ ನಿರಾಶ್ರಿತರಿಗೆ ಎಂತಹ ಸುವರ್ಣ ಅವಕಾಶ. ನಿಜಕ್ಕೂ ಈ ಪ್ರಹ್ಲಾದ ಆಪದ್‌ಬಾಂಧವ.ಎಂದುಕೊಂಡ ಜಡೆಮುನಿ.

ಇನ್‌ಫೋಸಿಸ್ ಭೇಟಿಯನ್ನು ಮುಗಿಸಿ ನಮ್ಮ ಇಬ್ಬರು ವಿಐಪಿಗಳು ಪ್ರಹ್ಲಾದನ ಆಫೀಸಿಗೆ ಹಿಂತಿರುಗಿದ್ದರು. ಜಡೆಮುನಿಯ ಮನದಲ್ಲಿ ಒಂದು ಸಣ್ಣ ಅಳುಕು ಪ್ರಾರಂಭವಾಗಿತ್ತು.


'ನೋಡಿ ಪ್ರಹ್ಲಾದ್ ನೀವೇನೋ ಒಂದು ಅತ್ಯಂತ ಸೃಜನಶೀಲ ಪರಿಹಾರವನ್ನು ಸೂಚಿಸಿದ್ದೀರ. ಅದಕ್ಕಾಗಿ ನಾನು ಆಭಾರಿ. ಆದರೆ ನಮ್ಮದು ಆಲ್‌ಇಂಡಿಯಾ ಸಂಸ್ಥೆ. ಲಕ್ಷಾಂತರ ಪ್ರೇತಗಳು ವಸತಿಗಾಗಿ ಹಾತೊರೆಯುತ್ತಿವೆ. ಈ ಸೈಬರ್‌ಸಿಟಿಯ ಪಾಳುಮಿದಳುಗಳು ನಮ್ಮ ಸಮಸ್ಯೆಯನ್ನು ಸಂಪೂರ್ಣವಾಗಿ ಪರಿಹರಿಸಬಲ್ಲುವೇ ಎಂಬುದು ನನ್ನ ಸಂದೇಹ.'

ಜಡೆಮುನಿಯ ಈ ಮಾತುಗಳನ್ನು ಕೇಳಿ, ಪ್ರಹ್ಲಾದ ಮಗುವಿಗೆ ತಿಳಿಯ. ಹೇಳುವಂತೆ ಕರುಣಾಪೂರಿತನಾಗಿ ನುಡಿದ.

'ಜಡೆಮುನಿ, ನಾನು ಸಜೆಸ್ಟಿಸಿದ್ದು ಸಂಪೂರ್ಣ ಪರಿಹಾರವಲ್ಲ. ಇದು ಕೇವಲ ಪ್ರಾರಂಭದ ಹಂತ ಅಷ್ಟೇ. ಅಮೆರಿಕಾ ಅಂತ ಒಂದು ದೇಶ ಇದೆ. ಅಲ್ಲಿ ಬಲಮಿದಿಳು ಮಾತ್ರವಲ್ಲ, ಎಡಮಿದಿಳೂ ಸಹಾ ಪಾಳುಬಿದ್ದಿರುತ್ತವೆ. ನಿಮ್ಮ ಕುಲಬಾಂಧವರು ಮೊದಲು ಇಲ್ಲಿ ನಮ್ಮ ನಾಡಿನಲ್ಲಿರುವ ಪಾಳುಮನಗಳನ್ನು ಆಕ್ರಮಿಸಿಕೊಳ್ಳಲಿ. ಅನಂತರ ಆ ಕಾಯಗಳನ್ನು ಅಮೆರಿಕೆಗೆ ಹೋಗುವಂತೆ ಪ್ರಚೋದಿಸಲಿ. ಅಲ್ಲಿಗೆ ಹೋಗಿ ಸೇರಿದನಂತರ ನಿರಂತರವಾಗಿ ಅಲ್ಲಿನ ಪಾಳುಮನಗಳನ್ನು ಆಕ್ರಮಿಸಿಕೊಳ್ಳಬಹುದು.'

ಫಲಶ್ರುತಿ

ಯಾಕೆ ನಮ್ಮ ಸಾಫ್ಟ್‌ವೇರ್ ತರುಣ ತರುಣಿಯರು ಅಮೆರಿಕಾ ಅಮೆರಿಕಾ ಅಂತ ಹಪಹಪಗುಟ್ತಾರೆ ಅಂತ ಈಗ್ಲಾದರೂ ತಿಳೀತೇ?



ನನ್ನ ದೃಷ್ಟಿಯಲ್ಲಿ ಉತ್ತಮ ಹಾಸ್ಯ ಸಾಹಿತ್ಯ

- ಬಾಗೂರು ಚಂದ್ರು

ಸುಮಾರು ಐವತ್ತು ವರ್ಷಗಳ ಹಿಂದಿನ ನನ್ನ ಬಾಲ್ಯದ ಬಾಗೂರಿಗೆ ದಿನಪತ್ರಿಕೆಗಳು ಬರುತ್ತಿರಲಿಲ್ಲ. ನಮ್ಮ ಮನೆಯ ಹತ್ತಿರದ ಟೈಲರ್ ಈಶ್ವರಪ್ಪನವರು ಮಾತ್ರ 'ಸಂಯುಕ್ತ ಕರ್ನಾಟಕ'ದ ಭಾನುವಾರದ ಸಂಚಿಕೆಗಳನ್ನು, ಬಹುಶಃ ಜೋಗ್ಲೆಕರ್ ವಾರಭವಿಷ್ಯ ಓದಲು, ಹುಬ್ಬಳ್ಳಿಯಿಂದ ತರಿಸುತ್ತಿದ್ದರು. ಈಶ್ವರಪ್ಪನವರು ಇಲ್ಲದ ಸಮಯಕ್ಕೆ ಕಾದಿದ್ದು ಅವರ ಮಗ ನಾಗೇಶನ ನೆರವಿನಿಂದ ನಾನು ಈ ಪತ್ರಿಕೆ ಅದರಲ್ಲೂ ಮುಖ್ಯವಾಗಿ ಲಾಂಗೂಲಾಚಾರ್ಯರ ಹರಟೆ ಓದುತ್ತಿದ್ದೆ. ಆಗ ನನಗೆ ಲಾಂಗೂಲ ಪದದ ಅರ್ಥ ಗೊತ್ತಿರಲಿಲ್ಲ, ಆ ಹರಟೆಯಲ್ಲಿನ ಹೆಚ್ಚಿನ ಅಂಶವೂ ತಿಳಿಯುತ್ತಿರಲಿಲ್ಲ. ಆದರೂ ಇದನ್ನು ಓದುವುದನ್ನು ಮಾತ್ರ ತಪ್ಪಿಸುತ್ತಿರಲಿಲ್ಲ. ಮುಂದೆ ಮೈಸೂರಿಗೆ ಬಂದ ಮೇಲೆ ಹುಬ್ಬಳ್ಳಿಯ ಈ ಪತ್ರಿಕೆಯ ಸಂಪರ್ಕ ಕಡಿಯಿತು.

1950ರ ದಶಕದಲ್ಲಿ 'ಕಸ್ತೂರಿ' ಮಾಸಪತ್ರಿಕೆ ಜನಪ್ರಿಯವಾದಂತೆ ಲಾಂಗೂಲಾಚಾರ್ಯ ಹೆಸರಿನಲ್ಲಿ ಬರೆಯುತ್ತಿದ್ದ ಪಾಡಿಗಾರು ವೆಂಕಟರಮಣಾಚಾರ್ಯ (ಪಾವೆಂ) ಕರ್ನಾಟಕದ ಎಲ್ಲಾ ಭಾಗಗಳ ಓದುಗರಿಗೂ ಪರಿಚಿತರಾದರು. ಪಾವೆಂ ಕಸ್ತೂರಿಯನ್ನು ಸುಮಾರು ಇಪ್ಪತ್ತು ವರ್ಷ ಸಾಕಿ ಸಲಹಿದರು. ಅದರಲ್ಲಿ ಅವರು ಏನು ಬರೆಯುತ್ತಿದ್ದರು ಎಂದು ಹೇಳುವುದಕ್ಕಿಂತ ಏನು ಬರೆಯುತ್ತಿರಲಿಲ್ಲ ಎಂದು ಹೇಳುವುದು ಸುಲಭ- ಆ ಪತ್ರಿಕೆಯ ವಾಚಕರ ವಾಣಿಗೆ ಅವರು ಪತ್ರ ಬರೆದಿರಲಾರರು!

ಪಾವೆಂ ಮೂಲತಃ ಜರ್ನಲಿಸ್ಟ್-ಪತ್ರಕಾರರು, ಸುತ್ತಮುತ್ತಲಿನ ಎಲ್ಲಾ ವಿದ್ಯಮಾನಗಳ ಬಗೆಗೂ ಅವರಿಗೆ ಆಸಕ್ತಿಯಿತ್ತು. ಎಲ್ಲದರಲ್ಲೂ ಕುತೂಹಲವಿದ್ದಾಗ - jack of all, master of none -ಆಗುವುದೇ ಜಾಸ್ತಿ. ಆದರೆ ಪಾವೆಂ ಎಲ್ಲವನ್ನೂ ಕೌತುಕದ ಕಣ್ಣುಗಳಿಂದ ನೋಡುತ್ತಲೇ, ಹಲವು ವಿಷಯಗಳಲ್ಲಿ ಅಗಾಧ ಪಾಂಡಿತ್ಯ ಗಳಿಸಿದರು. ಸಾಂಸ್ಕೃತಿಕ, ರಾಜಕೀಯ, ಸಾಮಾಜಿಕ, ಆರ್ಥಿಕ ವಿಷಯಗಳ ಮೇಲೆ ಅವರು ಅಧಿಕಾರಯುತವಾಗಿ ಬರೆಯಬಲ್ಲವರಾಗಿದ್ದರು. ಅವರ ಪದಾರ್ಥ ಚಿಂತಾಮಣಿ ನನಗೆ ಕಸ್ತೂರಿಯ ಮುಖ್ಯ ಆಕರ್ಷಣೆ. ಕಸ್ತೂರಿಯ ಪ್ರತಿ ಸಂಚಿಕೆಯನ್ನೂ ತುಂಬುವ ಶಕ್ತಿ ಪಾವೆಂಗಿತ್ತು. ಆದರೆ ಅವರು ಹಾಗೆ ಮಾಡದೆ ನೂರಾರು ಹೊಸ ಲೇಖಕರನ್ನು ಬೆಳೆಸಿದರು. ಪಾವೆಂ ಸ್ವತಃ ಒಬ್ಬ ಸೃಜನಶೀಲ ಲೇಖಕ. ಅವರ ಸಣ್ಣ ಕತೆಗಳಿಗೆ ಸಿಗಬೇಕಾದಷ್ಟು ಗಮನ ಸಿಕ್ಕಿಲ್ಲವೇನೋ. ಆದರೆ ಪಾವೆಂ ಕಸ್ತೂರಿಯಲ್ಲಿ ಎಂದೋ ಬರೆದಿದ್ದ ಕತೆಯನ್ನು ಜ್ಞಾಪಿಸಿಕೊಂಡು ರವಿ ಬೆಳಗೆರೆ ರಚಿಸಿದ 'ಪಾವೆಂ ಹೇಳಿದ ಕತೆ' ಕನ್ನಡದ ಅತ್ಯುತ್ತಮ ಸಣ್ಣಕತೆ ಕತೆಗಳಲ್ಲಿ ಸ್ಥಾನ ಪಡೆದಿದೆ!

ಪಾವೆಂ ಲಾಂಗೂಲಾಚಾರ್ಯರಾಗಿ ನೂರಾರು ಉತ್ತಮ ಹಾಸ್ಯಲೇಖನಗಳನ್ನು ಬರೆದಿದ್ದಾರೆ. ಇಲ್ಲಿರುವ 'ನನ್ನ ಆಸ್ಟ್ರಾ ಅರ್ಧ ಷಷ್ಟ್ಯಬ್ದಿ' ಕನ್ನಡದ ಅತ್ಯುತ್ತಮ ನಗೆ ಬರಹಗಳಲ್ಲಿ ಒಂದು ಎಂದು ನನ್ನ ಭಾವನೆ.

ನನ್ನ ಆಸ್ತ್ಮಾ ಅರ್ಧಷಷ್ಟ್ಯಬ್ದಿ

- ಲಾಂಗೂಲಾಚಾರ್ಯ

ಈ ವರ್ಷ ನಾನು ನನ್ನ ಆಸ್ತ್ಮಾ ಅಥವಾ ಗೂರಲುಬ್ಬಸದ ಅರ್ಧ ಷಷ್ಟ್ಯಬ್ದಿಯನ್ನು ಆಚರಿಸಲು ನಿರ್ಧರಿಸಿದ್ದೇನೆ. ನನಗೆ ಆಸ್ತ್ಮಾ ಪ್ರಾರಂಭವಾಗಿ ಈ ನವೆಂಬರಿಗೆ ಸರಿಯಾಗಿ ಮೂವತ್ತು ವರ್ಷಗಳು ತುಂಬುತ್ತಿವೆ. ಈ ಸಂದರ್ಭದಲ್ಲಿ ನಾನು ಈ ಮೂವತ್ತು ವರ್ಷಗಳಲ್ಲಿ ನುಂಗಿದ, ಮೂಸಿದ ಮತ್ತು ಚುಚ್ಚಿಸಿಕೊಂಡ ಹೋಮಿಯೋಪಥಿ, ಅಲೋಪಥಿ, ಆಯುರ್‌ಪಥಿ ಮೊದಲಾದ ಪಥಿಗಳ ಒಟ್ಟು 37 ಬಗೆಯ ಔಷಧಗಳ ಒಂದು ಪ್ರದರ್ಶನವನ್ನು ಏರ್ಪಡಿಸಬೇಕೆಂದಿದ್ದೇನೆ; ಮತ್ತು ಆಸ್ತ್ಮಾಕ್ಕೆ ನಾನು ಪ್ರಯೋಗಿಸಬೇಕಾದ ರಾಮಬಾಣೋಪಾಯಗಳಾವುವೆಂಬ ಬಗ್ಗೆ ನನಗೆ ವಿವಿಧ ಮಿತ್ರರಿಂದ ಬಂದ ಉಪದೇಶಗಳ ಸಂಗ್ರಹವನ್ನು ಪ್ರಕಟಿಸಬೇಕೆಂದಿದ್ದೇನೆ. ಈ ಉಪಾಯಗಳು ದೀರ್ಘಶ್ವಾಸ ಬಿಡುವುದರಿಂದ ಬೀಡಿ ಸೇದುವವರೆಗೆ, ಮಂತ್ರ ಹಾಕಿಸಿಕೊಳ್ಳುವುದರಿಂದ ಮೀನು ನುಂಗುವುದರವರೆಗೆ ಬಹು ಮುಖವಾಗಿವೆ. ಇದೇ ಸಂದರ್ಭದಲ್ಲಿ ನಾನು ಆಸ್ತ್ಮಾಕ್ಕಾಗಿ ಮಧ್ಯರಾತ್ರಿಯಲ್ಲಿ ಕರೆಸಿದ ಒಟ್ಟು 26 ಡಾಕ್ಟರರಿಗೊಂದು ಪಾರ್ಟಿಯನ್ನೂ ಕೊಡಬೇಕೆಂದಿದ್ದೇನೆ.

ನನ್ನ ಯೋಚನೆಯನ್ನು ಕೇಳಿ ನನ್ನ ಹೆಂಡತಿ ಸ್ವಲ್ಪ ಸಿಟಿದುಕೊಂಡಳು. ''ನನ್ನನ್ನು ಮದುವೆಯಾಗಿ ಮೂವತ್ತೈದು ವರ್ಷಗಳಾದರೂ ನೀವು ಯಾವ ಸಮಾರಂಭವನ್ನೂ ಮಾಡಲಿಲ್ಲ. ಈ ಆಸ್ತ್ಮಾಕ್ಕೆ ಅರ್ಧಷಷ್ಟ್ಯಬ್ದಿ ಮಾಡಬೇಕೆನ್ನುತ್ತೀರಿ! ನನಗಿಂತ ಗೂರಲೇ ಮೇಲಾಗಿ ಹೋಯಿತು ನಿಮಗೆ!'' ಎಂದು ದೂರಿಕೊಂಡಳು.

''ಪ್ರಿಯೆ! ಸ್ವಲ್ಪ ನ್ಯಾಯಾನ್ಯಾಯ ನೋಡು. ನಿನ್ನನ್ನು ಹೊರಗೆ ಹಾಕಲು ನಾನು ಎಂದೂ ಪ್ರಯತ್ನಿಸಿಲ್ಲ. ಆದರೆ ಈ ಆಸ್ತ್ಮಾ ನೋಡು. ನಾನು ಎಂಥೆಂಥ ಉಚ್ಚಾಟನ ಪ್ರಯೋಗಗಳನ್ನು ಮಾಡಿದರೂ ನನ್ನನ್ನು ಬಿಡದೆ ಈ ವಯಸ್ಸಿನಲ್ಲಿಯೂ ನನ್ನನ್ನು ಸೇವಿಸುತ್ತಿದ್ದಾಳೆ. ನಿಮ್ಮಿಬ್ಬರಲ್ಲಿ ಯಾರ ಪಾತಿವ್ರತ್ಯ ಹೆಚ್ಚು ನೀನೇ ಹೇಳು. ಸವತಿ ಮತ್ಸರ ಬೇಡ'' ಎಂದು ಸಬೂಬು ಹೇಳಿದೆ. ಇದಕ್ಕೆ ಅವಳ ಹೆಣ್ಣು ಬತ್ತಳಿಕೆಯಲ್ಲಿಯೂ ಯಾವ ಪ್ರತ್ಯಸ್ತ್ರ ಇರಲಿಲ್ಲ.

ಪ್ರಥಮ ಸಲ ನನಗೆ ಆಸ್ತ್ಮಾ ಬಂದದ್ದು 1943ರ ಅಕ್ಟೋಬರ್ 17ರ ರಾತ್ರಿ. ಅಂದಿನಿಂದ ಈ ಒಲಿದು ಬಂದ ನಾರಿ ವರ್ಷಕ್ಕೆ ಎರಡು ಸಲ ಮೇ-ಜೂನ್- ಮತ್ತು ಅಕ್ಟೋಬರ್-ನವೆಂಬರ್ ತಪ್ಪದೇ ಬಂದು ನನ್ನ ಯೋಗಕ್ಷೇಮ ವಿಚಾರಿಸಿಕೊಳ್ಳುತ್ತಾ ಇದ್ದಾಳೆ. ಮಳೆ ಬಂದು ಸ್ವಲ್ಪ ಬಿಸಿಲು ಕಾದರೆ ಮತ್ತು ಬಿಸಿಲು ಕಾದು ಮಳೆ ಬಂದರೆ ಅವಳಿಗೆ ನನ್ನನ್ನು ಸೇರುವ ಹಂಬಲ ತಡೆಯಲಾಗುವುದಿಲ್ಲ. ಅವಳು ಬರುವ ದಾರಿಗಳು ಹಲವು. ಆವಳು ಕಸ ಗುಡಿಸುವಾಗಿನ ಧೂಳಿನ ಜೆನ್ನೇರಿ ಬರುತ್ತಾಳೆ, ಹಾಲಿನ ಸಂಗಡ

ಬರುತ್ತಾಳೆ, ಬಟಾಟೆ ಪಲ್ಯದಲ್ಲಿ ಹೊಕ್ಕು, ಟೊಮ್ಯಾಟೋ ಸಾರಿನಲ್ಲಿ ಈಸುತ್ತ ಬರುತ್ತಾಳೆ. ಅವಳಿಂದ ತಪ್ಪಿಸಿಕೊಳ್ಳಬೇಕೆಂದು ನಾನು ಇವೆಲ್ಲವನ್ನೂ ವರ್ಜಿಸಿದರೆ ಬೆಳಗಿನ ಜಾವದ ಮಂಜಿನ ಪರದೆಯ ಹಿಂದೆ ಬಂದು ಬಿಡುತ್ತಾಳೆ.

ಎಲ್ಲಾ ನಲ್ಲೆಯರ ಹಾಗೆ ನನ್ನ ಆಸ್ತ್ಮಾದೇವಿ ಲಹರಿಯವಳು. ದೀರ್ಘ ಕಾಲದ ಒಡನಾಟದಿಂದ ನಾನು ಅವಳ ಅನೇಕ ಸ್ವಭಾವ ವೈಚಿತ್ರ್ಯಗಳನ್ನು ತಿಳಿದುಕೊಂಡಿದ್ದೇನೆ ಅವಳ ಬೇಕು-ಬೇಡಗಳನ್ನು ಅರ್ಥ ಮಾಡಿಕೊಂಡಿದ್ದೇನೆ. ಉದಾಹರಣೆಗೆ ಮೆಣಸಿನ ಕಾಳೆಂದರೆ ಅವಳಿಗೆ ಭಲೆ ಸಿಟ್ಟು, ಲವಂಗಕ್ಕೆ ಸ್ವಲ್ಪ ಮಣಿಯುತ್ತಾಳೆ. ತಂಪು ಪದಾರ್ಥ ಅವಳನ್ನು ಉದ್ರಿಕ್ತಗೊಳಿಸುತ್ತದೆ, ಇತ್ಯಾದಿ, ಆದರೆ ಅವಳ ಚಿತ್ತ ಹೇಳಲು ಬಾರದು. ಒಮ್ಮೊಮ್ಮೆ ಒಂದು ಗುಟುಕು ತಣ್ಣೀರು ಕುಡಿದರೆ ಸಾಕು, ಸೀನುಗಳ ಗರ್ಜನೆಯೊಡನೆ, ಸೋರುವ ಮೂಗಿನ ಪ್ರಳಯಧಾರೆಯೊಡನೆ ಬಂದುಬಿಡುತ್ತಾಳೆ. ಮತ್ತೊಮ್ಮೆ ತಟ್ಟೆತಟ್ಟೆ ಐಸ್‌ಕ್ರೀಮ್ ತಿಂದು ನಾಲಗೆ ಚಪಲ ತೀರಿಸಿಕೊಂಡ ಮೇಲೆ ಇಂದು ರಾತ್ರಿ ಹಾಸಿಗೆ ಮೂಸಿದೊಡನೆ ಉಸಿರು ಕಟ್ಟುವ ಹಾಗೆ ಅಪ್ಪಿಕೊಂಡು ಬಿಡುತ್ತಾಳೆ ಎಂದು ನಿರೀಕ್ಷಿಸುತ್ತಿರುವಾಗ ಅವಳ ಸುಳಿವೇ ಇಲ್ಲ. ಎಫಿಡ್ರಿನ್ ನುಂಗಿದರೆ ಒಮ್ಮೆ ಸದ್ದಿಲ್ಲದೆ ಹೊರಟುಹೋಗುತ್ತಾಳೆ, ಇನ್ನೊಮ್ಮೆ ಎದೆಯನ್ನೆಲ್ಲಾ ಒಣಗಿಸಿ ಉಸಿರನ್ನೇ ಕಸಿದುಕೊಳ್ಳುವಂತೆ ಕತ್ತು ಹಿಸುಕುತ್ತಾಳೆ. ಕೆಲವೊಮ್ಮೆ ಕಿಟಕಿ ತೆರೆದಿಟ್ಟುಕೊಳ್ಳಬೇಡ ಎಂದು ನಾಚುಗುಳಿ ಮೊದಲಗಿತ್ತಿಯಂತೆ ಹಟ ತೊಡುತ್ತಾಳೆ, ಇನ್ನೊಮ್ಮೆ ಮಾನಗೆಟ್ಟವಳ ಹಾಗೆ ಕಿಟಕಿಯನ್ನು ತೆಗೆದಿಟ್ಟುಕೊಳ್ಳದಿದ್ದರೆ ನಿನ್ನ ಕತ್ತು ಹಿಸುಕುತ್ತೇನೆನ್ನುತ್ತಾಳೆ.

ಬೆಂಗಳೂರು, ಬೆಳಗಾವಿ ಮೊದಲಾದ ಬಕಾರಾದಿ ಹೆಸರುಗಳುಳ್ಳ ಸ್ಥಳಗಳು ಅವಳ ಪ್ರೇಮವನ್ನು ಉದ್ರೇಕಿಸುತ್ತವೆಂದು ನನಗೆ ಸಂಶಯವಿದೆ. ಬೆಂಗಳೂರಿನಲ್ಲೊಮ್ಮೆ ನನ್ನನ್ನು ಹಿಡಿದುಕೊಂಡವಳು ಮದ್ರಾಸ್ ದಾರಿಯಲ್ಲಿ ಕೋಲಾರ ಹತ್ತಿರವಾದೊಡನೆ ತೊರೆದು ಹೋದಳು ಬೆಳಗಾವಿಯಲ್ಲೊಮ್ಮೆ ಬಂದ ಡಾಕ್ಟರರನ್ನೆಲ್ಲ ಸೋಲಿಸಿ ಹುಬ್ಬಳ್ಳಿಗೆ ಓಡಿಸಿದಳು. ಧಾರವಾಡದಲ್ಲಿ ಅವಳು ಯಾಕೆ ನನ್ನ ಸುದ್ದಿಗೆ ಬರುವುದಿಲ್ಲವೆಂದು ನನಗಿನ್ನೂ ಅರ್ಥವಾಗಿಲ್ಲ. ಕಾರವಾರದಲ್ಲಿ ಅವಳೇಕೆ ನನ್ನನ್ನು ತಬ್ಬಿಕೊಳ್ಳುತ್ತಾಳೆಂಬುದು ಇನ್ನೂ ಕಡಿಮೆ ಅರ್ಥವಾಗಿದೆ.

ನಿನ್ನ ಈ ಅನಿಷ್ಟ ಪ್ರಿಯಕರಿಯ ವಿಷಯ ಏನು ಬೋರು ಹೊಡೆಯುತ್ತೀರಪ್ಪ, ಸಾಕು ಮಾಡು, ಅಂತ ನೀವು ಯೋಚಿಸುತ್ತಿದ್ದೀರಿ - ನಾ ಬಲ್ಲೆ. ಆದರೆ ಅದೀಗ ಸ್ವಾರಸ್ಯ. ನಮ್ಮ ಮಕ್ಕಳು ಮೊಮ್ಮಕ್ಕಳ ಲೀಲೆಗಳನ್ನು ಹೇಳಿಕೊಳ್ಳುವ ಹಾಗೆ ನಾವು ನಮ್ಮ ರೋಗಗಳ ಲೀಲೆಗಳನ್ನು ಕೂಡ ಬಾಯಿ ಚಪ್ಪರಿಸಿಕೊಂಡು ಹೇಳಿಕೊಳ್ಳಲು ಕಲಿಯುತ್ತೇವೆ. ಇದಕ್ಕೆ ಇತರರ ಸಹಾನುಭೂತಿಯನ್ನು ಗಳಿಸುವುದೇ ಆಂತರಿಕ ಉದ್ದೇಶವೆಂದು ಹೇಳುವ ಮನೋವಿಜ್ಞಾನಿಗಳ ಮಾತನ್ನು ನಾವು ಒಪ್ಪುವುದಿಲ್ಲ. ಸಹಾನುಭೂತಿಯ ಸಾನ್ನಿಧ್ಯದಲ್ಲಿ ನಾನು ಯಾವಾಗಲೂ ಸಂಕೋಚದಿಂದ ಮುದುಡಿಕೊಳ್ಳುತ್ತೇನೆ. ನನಗೆ ಆಕಸ್ಮಾತ್ತಾಗಿ

ಬಂದು ಹೋದ ನ್ಯುಮೋನಿಯ, ಟೈಫಾಯ್ಡ್, ಪ್ಲೂರಸಿ ಮೊದಲಾದ ರೋಗಗಳನ್ನು ಕುರಿತು ನಾನು ಹೀಗೆ ವರ್ಣಿಸುವುದಿಲ್ಲ.

ವಿಷಯ ಹಾಗಿಲ್ಲ. ಕ್ರಿಸ್ತದೇವ ನಿಮ್ಮ ಶತ್ರುವನ್ನು ಪ್ರೀತಿಸಿರಿ ಎಂದು ಬೋಧಿಸಿದ್ದಾನೆ. ಇದು ಒಮ್ಮೆಲೇ ಸಾಧಿಸಲು ಕಷ್ಟವೆಂದು ನಾನು ಯಾಕೆ, ಕ್ರಿಸ್ತನೇ ಒಪ್ಪಬಹುದು. ಆದರೆ ನಿಮ್ಮ ದೀರ್ಘ ಶತ್ರುವನ್ನು ನೀವು ಪ್ರೀತಿಸಲು ಕಲಿತೇ ಕಲಿಯುತ್ತೀರಿ, ಒಮ್ಮೆಲೇ ಅವನೇನಾದರೂ ಸತ್ತುಹೋದರೆ ನೀವು ಬಹಳವಾಗಿ ಗಾಬರಿಗೊಳ್ಳುತ್ತೀರಿ. ನಿಮಗೆ ಭಣ ಭಣ ಎನಿಸತೊಡಗುತ್ತದೆ. ಒಬ್ಬ ಶತ್ರುವಿಗೆ ಬಹಳ ಕಾಲ ಒಗ್ಗಿಕೊಂಡ ಮೇಲೆ ಹೊಸ ಶತ್ರುವಿಗೆ ಒಗ್ಗಿಕೊಳ್ಳುವುದು ತುಂಬಾ ಕಷ್ಟ. ರೋಗಗಳ ವಿಷಯವೂ ಹಾಗೆಯೇ.

ನನ್ನ ಆಸ್ತ್ಮಾ ಅರ್ಧಷಷ್ಟ್ಯಬ್ದಿಯ ವಿಚಾರ ಸುಳಿದಿದ್ದೇ ಹೀಗೆ. ಕಳೆದ ಇಷ್ಟೆಲ್ಲಾ ವರ್ಷಗಳಿಂದ ವರ್ಷಕ್ಕೆರಡು ಬಾರಿ ಬಂದು ಹೋಗುತ್ತಿದ್ದ ಆಸ್ತ್ಮಾವನ್ನು ಈ ಸಲದ ನಾಡ ಹಬ್ಬದ ಕಾಲದಲ್ಲಿಯೂ ನಾನು ನಿರೀಕ್ಷಿಸುತ್ತಿದ್ದೆ. ಆದರೆ ಅದು ಬರುವ ಲಕ್ಷಣವೇ ಕಾಣಿಸಲಿಲ್ಲ. ನಮ್ಮ ಜೋಯಿಸರೊಮ್ಮೆ ಹೇಳಿದ್ದರು, ಕೆಲವು ದೀರ್ಘ ರೋಗಗಳು ಮೂವತ್ತು ವರ್ಷಗಳ ನಂತರ ಬಿಟ್ಟು ಹೋಗುವುದುಂಟು ಏಕೆಂದರೆ ಮೂವತ್ತು ವರ್ಷಗಳ ಶನಿ ರಾಶಿ ಚಕ್ರದಲ್ಲಿ ಒಂದು ಪ್ರದಕ್ಷಿಣೆ ಮುಗಿಸಿರುತ್ತಾನೆ ಅಂತ. ಅದು ನೆನಪಾಗಿ ಆಸ್ತ್ಮಾ ನನ್ನನ್ನು ತೊರೆದು ಹೋಗಿರಬಹುದೇ ಎಂದು ಸಂಶಯವಾಯಿತು. ಈ ಆಸ್ತ್ಮಾ ಸೀಜನ್ನಿಗಾಗಿ ನಾನು ಅಣಿಗೊಳಿಸಿಟ್ಟಿದ್ದ ಜೀಟ್, ಎಫಿಡ್ರಿನ್, ಕಾರ್ಟಿಕೋಸ್ಟಿರಾಯ್ಡ್ ಗುಳಿಗೆಗಳು ಸ್ವಚ್ಛಗೊಳಿಸಿ, ತಯಾರಿಸಿಟ್ಟಿದ್ದ ಇನ್ ಹೇಲರ್, ಹೊಸದಾಗಿ ತಂದಿಟ್ಟಿದ್ದ ಬಿಸಿನೀರ ಚೀಲ, ಆಯುರ್ವೇದದ ದಶಮೂಲಾರಿಷ್ಟ, ದ್ರಾಕ್ಷಾರಿಷ್ಟ, ಅಗಸ್ತ್ಯ ರಸಾಯನ ಇವೆಲ್ಲ ವ್ಯರ್ಥವಾಗುವವೇ? ಈ ಮೂವತ್ತು ವರ್ಷಗಳಲ್ಲಿ ನಾನು ಆಸ್ತ್ಮಾ ಚಿಕಿತ್ಸೆಗಾಗಿ ಖರ್ಚು ಮಾಡಿದ್ದ ಹಣವನ್ನೆಲ್ಲ ಲೆಕ್ಕ ಮಾಡಿದೆ. ಐದು ಸಾವಿರ ಚಿಲ್ಲರೆ ಆಗಿತ್ತು. ಆಮೇಲೆ ಒಮ್ಮಿಂದೊಮ್ಮೆಲೆ ನನ್ನ ಹೆಂಡತಿಗೆ ಇದೇ ಅವಧಿಯಲ್ಲಿನಾನು ತಂದು ಕೊಟ್ಟ ಸೀರೆಗಳ ಬೆಲೆ ಇದಕ್ಕಿಂತ ಸುಮಾರು ಕಡಿಮೆಯಾಗಿದೆ ಎಂಬ ಅರಿವು ಬಂತು. ಇಷ್ಟು ಖರ್ಚು ಮಾಡಿ ಅದನ್ನು ಸಾಕಿದ ಮೇಲೆ ಅದು ನನ್ನನ್ನು ಬಿಟ್ಟು ಹೋಯಿತು? ನಾನು ಈ ಯೋಚನೆಯಿಂದ ಕಣ್ಣೀರು ಸುರಿಸಿದೆ ಎಂದು ಹೇಳಿದರೆ ಸ್ವಲ್ಪ ಅತಿಶಯೋಕ್ತಿಯಾದೀತು. ಆದರೆ ಖಂಡಿತವಾಗಿ ನನಗೆ ಏನನ್ನೋ ಕಳೆದುಕೊಂಡ ಹಾಗೆ ಅನ್ನಿಸಿತು. ನನ್ನ ಮಿತ್ರರೂ ಹಿತೈಷಿಗಳೂ ಆಸ್ತ್ಮಾದ ಗುಣಗಳನ್ನು ಬಣ್ಣಿಸಿದ್ದು ನೆನಪಾಯಿತು. ಒಬ್ಬರು ಆಸ್ತ್ಮಾ ಇದ್ದವರಿಗೆ ಆಯುಷ್ಯ ಹೆಚ್ಚು ಅಂದಿದ್ದರು. ಇದು ನನಗಿಂತ ನನ್ನ ತೆಗೆದುಕೊಂಡ ಕಂಪನಿಗೆ ಹೆಚ್ಚು ಸುವಾರ್ತೆಯಾಗಿತ್ತಾದ್ದರಿಂದ ನಾನೇನೂ ಉಬ್ಬಲಿಲ್ಲ. ಆಸ್ತ್ಮಾ ಬಲು ತ್ರಾಸದ ಕಾಯಿಲೆಯೇನೋ ನಿಜ, ಆದರೆ ಆಸ್ತ್ಮಾ ಇದ್ದವರಿಗೆ ಕ್ಷಯರೋಗ ಬರುವುದಿಲ್ಲ ಎಂದು ಇನ್ನೊಬ್ಬರು ಆಶ್ವಾಸನೆ ನೀಡಿದ್ದುದನ್ನು ನೆನೆದುಕೊಂಡಾಗ ನನಗಿನ್ನು ಕ್ಷಯರೋಗ ಬಂದೀತೆ, ಈ ವಯಸ್ಸಿನಲ್ಲಿ ಈ ಹೊಸ ರೋಗದೊಡನೆ ಒಗೆತನ ನನಗೆ ಸಾಧ್ಯವಾದೀತೇ ಎಂದು ಯೋಚನೆಗೆ ಬಿದ್ದೆ.

ಮತ್ತೊಂದು ವಿಷಯ ನನ್ನ ವಿಷಾದವನ್ನು ಭಯದ ರೂಪಕ್ಕೆ ತಿರುಗಿಸಿತು. ಪ್ರತಿ ಆಸ್ತ್ಮಾ ಸೀಜನ್ನಿನಲ್ಲಿ ಉಲ್ಬಣಿಸಿದ ಉಬ್ಬಸದಿಂದ ಸಾವಿನ ದವಡೆಯನ್ನು ಹೊಕ್ಕಂತಾಗಿ ನನ್ನ ಹೆಂಡತಿಯ ಆರೈಕೆಯಿಂದ ನಾನು ಮರಳಿ ಬರುತ್ತಿದ್ದೆ. ಇಂತಹ ಪ್ರತಿಯೊಂದು ಹೋರಾಟದೊಡನೆ ನನ್ನ ಹೆಂಡತಿಗೆ ನಾನು ಹೆಚ್ಚು ಜೀವದಗಂಟೆನಿಸುತ್ತ ಬಂದಿದ್ದೇನೆ. ಆಸ್ತ್ಮಾ ಹೋಗಿಬಿಟ್ಟರೆ ನನ್ನ ಹೆಂಡತಿಯ ದೃಷ್ಟಿಯಲ್ಲಿ ನನ್ನ ಮೌಲ್ಯ ಕಡಿಮೆಯಾದೀತೆ?

ಆದರೆ, ಇಲ್ಲಿ ನನ್ನ ಶಂಕೆಗಳು ನಿರಾಧಾರವಾಗಿದ್ದವು. ನಿನ್ನೆ ರಾತ್ರಿ ನಾನು ಅಕಸ್ಮಾತ್ತಾಗಿ ಸೀನತೊಡಗಿದೆ. ಬೆಳಗಿನ ಜಾವದಲ್ಲಿ ಚೌಡಯ್ಯನವರ ಹದಿನೇಳು (ಅಥವಾ ಹತ್ತೊಂಬತ್ತೊ?) ತಂತಿಯ ಪಿಟೀಲಿನ ಮೇಲೆ ಲಘುವಾಗಿ ಕಮಾನು ಆಡಿಸಿದಂತೆ ನನ್ನೆದೆಯಿಂದ ನಾದಸಂದೋಹ ಹೊರಹೊಮ್ಮಲಾರಂಭಿಸಿತು. ಐದು ಗಂಟೆಗೆ ಒಣ ಕೆಮ್ಮು ಪ್ರಾರಂಭವಾಯಿತು. ನನ್ನ ಹೆಂಡತಿ ಗಡಬಡಿಸಿ ಎದ್ದು ಬಿಸಿ ಬಿಸಿ ಕಾಫಿ ಮಾಡಿ ತಂದಳು. ನನ್ನ ತಿದಿಹೊತ್ತುವ ಎದೆಯನ್ನು ಪೂಸುತ್ತ "ಬಹಳ ತ್ರಾಸಾಗುತ್ತಾ? ಡಾಕ್ಟರರಿಗೆ ಹೇಳಿಕಳಿಸಲಾ?" ಎಂದು ಕೇಳಿದಳು. ನಾನು ಆಸ್ತ್ಮಾ ಅರ್ಧಷಷ್ಟ್ಯಬ್ದಿಯನ್ನು ಆಚರಿಸಲು ನಿರ್ಧರಿಸಿದೆ.



ವಿದ್ಯಮಾನಗಳು

- ಕು.ಕ.

ವಿಧಾನಸಭಾ ಚುನಾವಣೆಗಳ ಮತ್ತೊಂದು ಸುತ್ತು ಮಗಿದಿದೆ. ಬದಲಾವಣೆಗೆ ಎನ್ನುವಂತೆ ಮತದಾರರು ಚುನಾವಣಾ ಪೋರಾರತ್ನರ- ಒಪಿನಿಯನ್-ಎಕ್ಸಿಟ್ ಪೋಲ್ ಮಂದಿಗಳ - ಮಾತು ಕೇಳಿದ್ದಾರೆ. ಈ ಪರಿಣತರೆಂದು ಹೇಳಿಕೊಳ್ಳುವವರು ಹಳೆಯ ತಮ್ಮ ಸರಣಿ ಸೋಲುಗಳನ್ನು ಮರೆತು ಇಂದಿನ ಯಶಸ್ಸಿಗೆ ಬೀಗುತ್ತಿದ್ದಾರೆ. ದಕ್ಷಿಣದ ತಮಿಳು ಮಲಯಾಳಂ ಮಂದಿ ಇದ್ದ ಸರ್ಕಾರಕ್ಕೆ ಗೇಟ್‌ಪಾಸ್ ಕೊಟ್ಟಿದ್ದರೆ, ಪೂರ್ವದ ಬಂಗಾಲಿ ಅಸ್ಸಾಮಿಯಾ ಭಾಷಿಗರು ಇದ್ದದ್ದು ಇದ್ದಹಾಗೇ ಇರುವುದೇ ಕ್ಷೇಮ ಎಂದು ನಿಶ್ಚಯಿಸಿದ್ದಾರೆ. ವಂಗಬಂಧುಗಳಿಗೆ ಪಾಪ ಬೇರೆ ಆಯ್ಕೆಯೇ ಇರಲಿಲ್ಲವಂತೆ. ಗಂಡ-ಹೆಂಡತಿಯರ ಜಗಳದಲ್ಲಿ ಕೂಸು ಬಡವಾಯಿತು, ತೃಣ-ಮೂಲ ಹಾಗೂ ಹೈಕಮಾಂಡ್-ಮೂಲ ಕಾಂಗ್ರೆಸುಗಳ ಜಗಳದಲ್ಲಿ ಕಮ್ಯೂನಿಷ್ಟರು ಬಡಕಾಯಿಸಿದರು! ಕೆಂಪು ಬಾವುಟದವರ ವಿಜಯದಲ್ಲೂ ಒಂದು ತರಹದ ಗಮ್ಮತ್ ಇದೆ. ಬಂಗಾಲದಲ್ಲಿ ಬುದ್ಧದೇವ ಐಟಿ-ಬಿಟಿ ಸಮರ್ಥಕ ಎಂದು ಗೆದ್ದಿದ್ದರೆ ಕೇರಳದಲ್ಲಿ ಅಚ್ಯುತಾನಂದ ಹೊಸ ತಂತ್ರಜ್ಞಾನದ ಕಡುವಿರೋಧಿ ಎನ್ನುವ ಖ್ಯಾತಿಯಿಂದ ಗೆದ್ದಿದ್ದಾರಂತೆ!

★★★

ತಮಿಳ್ ತಾಯ್ ವಾಳ್ಗ ಎಂದು ತಮಿಳರು ಕೂಗಿದ ಐವತ್ತುವರ್ಷಗಳ ನಂತರ ನಾವು ಕನ್ನಡತಾಯಿಗೆ ಆರತಿಮಾಡಲು ಪ್ರಾರಂಭಿಸಿದೆವು. ಅಲ್ಲಿ ಎಂಜಿಆರ್ ಶಿವಾಜಿ ಮನ್ರಂಗಳು ದೊಡ್ಡದಾಗಿ ಬೆಳೆದ ಇಪ್ಪತ್ತು ವರ್ಷದ ಮೇಲೆ ಇಲ್ಲಿ ನಮ್ಮ ಸ್ಟಾರುಗಳ ಅಭಿಮಾನಿ ಸಂಘಗಳು ಬಂದವು. ಇವತ್ತು ತಮಿಳುನಾಡಿನಲ್ಲಿ ಆದದ್ದು ನಾಳೆ ಕರ್ನಾಟಕದಲ್ಲಿ ಎನ್ನುವಹಾಗಿದ್ದದ್ದು ಈಗ ನಾವು ನಿನ್ನೆ ಮಾಡಿದ್ದನ್ನು ತಮಿಳರು ಇಂದು ಅನುಕರಿಸಿದ್ದಾರೆ! ಇಲ್ಲಿ ನಾವು ಮಗ-ತಂದೆ ಜೋಡಿಗೆ ರಾಜ್ಯದ ಸಮಸ್ತ ಅಧಿಕಾರ ವಹಿಸಿಕೊಟ್ಟ ನಂತರ ತಮಿಳರು ಅಲ್ಲಿನ ತಂದೆ-ಮಗ ಜೋಡಿಗೆ ಈಗ ಪಟ್ಟಕಟ್ಟಿದ್ದಾರೆ. ಒಂದು ವಿಷಯದಲ್ಲಾದರೂ ನಾವು ತಮಿಳರಿಗಿಂತ ಮುಂದೆ ಎನ್ನುವುದಕ್ಕೆ ಖುಶಿಪಡಲೇಬೇಕು! ಇಲ್ಲೂ ಚೂರು ವ್ಯತ್ಯಾಸವಿದೆ. ಅಲ್ಲಿ ಅಪ್ಪ-ಮಗ ಖುಲ್ಲಂಖುಲ್ಲಂ ಮುಖ್ಯಮಂತ್ರಿ (ಸೂಪರ್) ಮಂತ್ರಿ ಆದರೆ ಇಲ್ಲಿ ಎಲ್ಲಾ ಮುಚ್ಚುಮರೆ, ಇದ್ದದ್ದು ಇಲ್ಲ ಎನ್ನುವ ಭ್ರಮೆಯ ನಾಟಕ! ಅಲ್ಲಿ ಅಪ್ಪ ಡ್ರೈವರ್ ಸೀಟಿನಲ್ಲಿ, ಪಕ್ಕದಲ್ಲಿ ಸಹಾಯಕ್ಕೆ ಮಗ. ಇಲ್ಲಿ ಕುಮಾರ ಚಾಲಕನ ಸ್ಥಾನದಲ್ಲಿ, ಅಪ್ಪನದು ಬ್ಯಾಕ್ ಸೀಟ್ ಡ್ರೈವಿಂಗ್. ಮಗ ಆಕ್ಸಲೇಟರ್ ಒತ್ತಿದ್ದಾಗ ಅಪ್ಪ ಬ್ರೇಕ್ ಅದುಮುವ (ಮತ್ತು ವೈಸಾವರ್ಸಾ) ಅರೆಂಜ್‌ಮೆಂಟ್. ಅಲ್ಲಿ ಗಾಡಿ ಐದು ವರ್ಷ ರಸ್ತೆಮೇಲೆ ಇರುತ್ತದೆ ಎನ್ನುವ ಖಾತರಿ. ಇಲ್ಲಿನ ಗಾಡಿ ಯಾವ ಕ್ಷಣದಲ್ಲಾದರೂ ಪ್ರಪಾತಕ್ಕೆ ಬೀಳಬಹುದು ಎನ್ನುವ ಅನುಮಾನ.

★★★

ಒಪಲ್ ಮೆಹ್ತಾಳಿಗೆ ಸಿಕ್ಕ ಬಲವಂತ ಚುಂಬನ, ಇದರಿಂದ ಅವಳಿಗೆ ಬಂದ ಕೋಪ, ಆಗ ತೆಗೆದ ಅವಳ ಭಾಗ್ಯದ ಬಾಗಿಲು- ಎನ್ನುವ ಉದ್ದ ಹೆಸರಿನ ಕಾದಂಬರಿ ನೀವು ಓದಿರಲಾರಿರಿ. ಆದರೆ ಕಾವ್ಯಾ ವಿಶ್ವನಾಥನ್ ಹೆಸರಿನ ಅಮೆರಿಕಾದ ಅತಿಪ್ರತಿಷ್ಠಿತ ವಿಶ್ವವಿದ್ಯಾಲಯದ ಎರಡನೆಯ ಬಿಎ ತರಗತಿಯ ತಮಿಳು ಹುಡುಗಿ ದಿಢೀರಾಗಿ ಏರಿದ ಎತ್ತರ ಅಷ್ಟೇ ದಿಢೀರಾಗಿ ಬಿದ್ದ ಆಳದ ಸುದ್ದಿ ಓದೇ ಇರುತ್ತೀರಿ. ಈ ಷೋಡಶಿಯದು ಕದ್ದರೇನಂತೆ ಗೊತ್ತಾಗದಿದ್ದರಾಯ್ತು ಎನ್ನುವ ಅತಿಚಾಲಾಕೀ? ಅಥವಾ ಮೊದಲ ಕಾದಂಬರಿ ಬರೆಯುವ ಉತ್ಸಾಹದ ಮುಗ್ಧತೆಯೇ? ಉತ್ತರ ಏನೇ ಇರಲಿ ಈ ಅಪರಿಚಿತ ಲೇಖಕಿಯ ಮೊದಲ ಕಾದಂಬರಿಯ ಹತ್ತು ಸಾವಿರ ಪ್ರತಿಗಳು ಒಂದೇ ವಾರದಲ್ಲಿ ಮಾರಾಟವಾಗಿತ್ತಂತೆ. ಟೀವಿ ಯುಗದಲ್ಲಿ ಪುಸ್ತಕಗಳನ್ನು ಓದುವವರೇ ಇಲ್ಲ ಎನ್ನುವ ಈ ದಿನಗಳಲ್ಲಿಯೂ ಅಲ್ಲಿ ಹೊಸ ಇಂಗ್ಲೀಷ್ ಪುಸ್ತಕಗಳಿಗೆ ಇಂತಹ ಬೇಡಿಕೆ. ಇಲ್ಲಿ ನಮ್ಮೂರಿನಲ್ಲಿ ಹೆಸರುಮಾಡಿದ ಲೇಖಕರ ಹೊಸಕೃತಿಗಳಿಗೂ ಪ್ರಕಾಶಕರ ತಾರಮ್ಮಯ್ಯ, ತಮ್ಮ ಖರ್ಚಿನಲ್ಲಿಯೇ ಪ್ರಿಂಟ್ ಮಾಡಿಸಿದ ಹೊಸಬರ ಪುಸ್ತಕಗಳ ಎಲ್ಲಾ ಪ್ರತಿಗಳೂ ಕಪಾಟಿನಲ್ಲಿಯೇ ಉಳಿಯುವ ಶಾಶ್ವತ ಸಾಹಿತ್ಯ.

★★★

ದೂರ ಸಂವೇದಿ ಉಪಗ್ರಹ ಎಂದು ಎಲ್ಲೋ ಓದಿದ್ದೆ. ಬಹಳ ಜನ ಇದೇ ತರಹವೇನೋ- ಹತ್ತಿರದ್ದಕ್ಕೆ ಕಣ್ಣು ಕುರುಡು, ದೂರದ್ದಕ್ಕೆ ಅತಿ ಚುರುಕು. ದಿನಾ ಕಾಫಿಕುಡಿಯುವ ಹೋಟಲಿನಲ್ಲಿ ಏಳೆಂಟು ವರ್ಷಗಳ ಪುಟ್ಟ ಹುಡುಗ ಬೆಳಗಿನಿಂದ ರಾತ್ರಿವರೆಗೂ ಬಗ್ಗಿ ನೆಲ ಒರಸುತ್ತಿರುವುದನ್ನು ಮಧ್ಯೆಮಧ್ಯೆ ಥೋಟಾ ಮ್ಯಾನೇಜರ್ ಕೈಲಿ ಗುದ್ದಿಸಿಕೊಳ್ಳುತ್ತಿರುವುದು ಇಂತಹವರಿಗೆ ಕಾಣಿಸುವುದೇ ಇಲ್ಲ. ಇವರ ಪಕ್ಕದ ಮನೆಯ ಸಾಹುಕಾರರ ಹೆಂಡತಿ ಹಳ್ಳಿಯಿಂದ ಕರೆಸಿಕೊಂಡು ಮನೆಕೆಲಸಕ್ಕೆ ಇಟ್ಟುಕೊಂಡಿರುವ ಇಷ್ಟೇ ವಯಸ್ಸಿನ ಹುಡುಗಿ ಅಮಾನವೀಯ ಹಿಂಸೆಯಿಂದ ಅಳುತ್ತಿರುವುದು ಇವರಿಗೆ ಕೇಳಿಸುವುದೇ ಇಲ್ಲ. ಆದರೆ ಪತ್ರಿಕೆಯಲ್ಲೋ ಟೀವಿಯಲ್ಲೋ ಮಕ್ಕಳಿಗೆ ಹಿಂಸೆಯ ಸುದ್ದಿ ಓದಿದಾಗ ಮಾತ್ರ ಇವರ ಸಂವೇದನೆ ತಟಕ್ಕನೇ ಜಾಗೃತವಾಗುತ್ತದೆ. ಇದು ಮಾನವ ಹಕ್ಕುಗಳ ಉಲ್ಲಂಘನೆ ಎಂದು ಕೂಗಾಡುತ್ತಾರೆ. ಮೊನ್ನೆ ಆದದ್ದೂ ಇದೇ. ಬುಧಿಯಾ ಹೆಸರಿನ ಪುಟ್ಟಪೋರ ತುಂಬಾ ದೂರ ಓಡಿದ್ದು ನೋಡಿ ಅವನನ್ನು ಓಡಿಸಿದವನ ಮೇಲೆ ದೆಹಲಿಯ, ಒರಿಸ್ಸಾ ರಾಜಧಾನಿಯ ದೊಡ್ಡದೊಡ್ಡ ಮಾನವಹಕ್ಕುಗಳ ರಕ್ಷಕರು ಕೆಂಡಾಮಂಡಲವಾಗಿದ್ದಾರೆ. ಆದರೆ ಇದೇ ಬುಧಿಯಾ ಹಸುಳೆಯಾಗಿದ್ದಾಗ ಅವರಮ್ಮ ಅವನನ್ನು ಕೆಲವೇ ನೂರು ರೂಪಾಯಿಗಳಿಗೆ ಮಾರಿದಾಗ, ಆ ಹಸುಳೆ ರಸ್ತೆಯಲ್ಲಿ ಭಿಕ್ಷೆ ಬೇಡುತ್ತಿದ್ದಾಗ ಈ ಮಂದಿ ಏನು ಮಾಡುತ್ತಿದ್ದರೋ ಗೊತ್ತಿಲ್ಲ.

★★★

ಬೀರ್‌ಬಲಿ ಪಾಡ್ಯಮಿ

- ವಿಕ್ರಮ ಕವಲಿ

ಅಯ್ಯಾ ನಾವೆಲ್ಲ 'ಚಾ ಕುಡಿಸುವ' (tea totaller) ಗುಂಪಿನವರು. ಬೀರು, ಜಿನ್ನು ಮುಂತಾದವುಗಳೆಲ್ಲ ನಮಗೆ ವರ್ಜ್ಯ ಎಂದು ದೂರ ಸರಿಯದಿರಿ. ಇಲ್ಲಿ 'ಬೀರು' ಎಂಬುದು ಪ್ರತ್ಯೇಕ ಪದವಲ್ಲ. 'ಬೀರಬಲ್' ಎಂಬ ಚತುರನ ಹೆಸರಿನ ಪೂರ್ವಭಾಗ, 'ಬಲಿ ಪಾಡ್ಯ'ದ ದಿನ ನಡೆದ ಕತೆಯಾದ್ದರಿಂದ ಎರಡೂ ಸೇರಿಕೊಂಡು ಈ ರೂಪ ಪಡೆದುಕೊಂಡಿವೆ.

ದೈತ್ಯ ಕುಲಗುರು ಶುಕ್ರಾಚಾರ್ಯರಿಗೆ ಎರಡೂ ಕಣ್ಣುಗಳಿದ್ದ ಕಾಲ. ಅವರಿಗೆ ಮಹಾವಿಷ್ಣು ವಾಮನ ರೂಪದಲ್ಲಿ ಬಂದು ಬಲಿಚಕ್ರವರ್ತಿಯನ್ನು ಗತಿಕಾಣಿಸುವ ಹುನ್ನಾರದಲ್ಲಿರುವ ಮಾಹಿತಿ ಗೂಢಚಾರರ ಮೂಲಕ ತಿಳಿದು ಬಂದಿತ್ತು.

"ರಾಜಾ, ನಿನ್ನ ದಾನಶೂರತ್ವದ ಲಾಭ ಪಡೆದುಕೊಂಡು ನಿನ್ನನ್ನು ಪಾತಾಳಕ್ಕೆ ಅಟ್ಟುವ ಯೋಜನೆ ರೂಪುಗೊಳ್ಳುತ್ತಿದೆ."

"ಛೇ! ಅದಕ್ಕಾಗಿ ನಾನು ಇಡೀ ಜನ್ಮ ಕಷ್ಟಪಟ್ಟು, ಇಷ್ಟೊಂದು ನಿಷ್ಠೆಯಿಂದ ಗಳಿಸಿಕೊಂಡಿರುವ ದಾನ ಶೂರನೆಂಬ ಬಿರುದನ್ನು ಬಿಟ್ಟುಕೊಡಬೇಕೇ? ಸಾಧ್ಯವೇ ಇಲ್ಲ"

"ಸರ್ವನಾಶ ಎದುರಾದಾಗ ಅರ್ಧದಷ್ಟನ್ನಾದರೂ ಉಳಿಸಿಕೊಳ್ಳುವ ಪ್ರಯತ್ನ ಮಾಡುವವ ಪಂಡಿತ. ನೀನು ಅಂಥವನಲ್ಲ ಎಂದು ನನಗೆ ಗೊತ್ತು. ಅದಕ್ಕೆಂದೇ ಬೀರಬಲ್ ಎಂಬ ಚತುರಮತಿಯ ಸೇವೆಯನ್ನು ಎರವಲು ಪಡೆದುಕೊಂಡಿದ್ದೇನೆ. ನೀನು ನಿನ್ನ ತತ್ವಕ್ಕೇ ಅಂಟಿಕೊಂಡಿರು. ದಾನ ಮಾಡು. ಆ ಬಳಿಕ ಕೊಟ್ಟ ದಾನವನ್ನು ಪಡೆದುಕೊಳ್ಳುವುದಕ್ಕೆ ನಮ್ಮ ಹೊಸ ಕ್ರಮಗಳ ಪ್ರಕಾರ ನಡೆದುಕೊಳ್ಳಬೇಕೆಂದು ನಮ್ಮ ಕಡೆಗೆ ಕಳಿಸಿಬಿಡು. ಮಿಕ್ಕದ್ದನ್ನು ನಾವು ನೋಡಿಕೊಳ್ಳುತ್ತೇವೆ."

ಬಲಿ ಚಕ್ರವರ್ತಿ ಒಪ್ಪಿಕೊಂಡ.

ತನ್ನ ಯೋಜನೆಯ ಪ್ರಕಾರ ವಾಮನನ ಆಕಾರದಲ್ಲಿ ಪುಟ್ಟ ಪುಟ್ಟ ಹೆಜ್ಜೆಗಳನ್ನಿಡುತ್ತ ಬಂದ ವಿಷ್ಣು. ದಾನ ಪಡೆಯುವವರ ಸಾಲಿನಲ್ಲಿ ನಿಂತ. ತನ್ನ ಸರದಿ ಬಂದಾಗ 'ನನಗೆ ಮೂರು ಅಡಿ ನೆಲ ಕೊಡಮಾಡಬೇಕು' ಎಂದು ಬಲಿಚಕ್ರವರ್ತಿಯನ್ನು ಕೇಳಿಕೊಂಡ.

"ನಾನು ದಾನ ಬೇಡಿದವರಿಗೆ ಎಂದೂ ಇಲ್ಲ ಎಂದವನಲ್ಲ. ಕೊಟ್ಟಿದ್ದೇನೆ. ಸರಿ. ಮುಂದಿನ ಕ್ರಮಕ್ಕಾಗಿ ಅವರಲ್ಲಿ ಹೋಗು" ಎಂದು ಶುಕ್ರಾಚಾರ್ಯ ಮತ್ತು ಬೀರಬಲ್ ಕುಳಿತುಕೊಂಡ ಕಡೆಗೆ ತೋರಿಸಿದ ಬಲಿ.

"ಏನಯ್ಯಾ ಪುಟಾಣಿ ಮರಿ, ಮಹಾರಾಜರಿಂದ ದಾನವನ್ನು ಪಡೆದುಕೊಂಡೆಯಾ?" ಎಂದರು ಶುಕ್ರಾಚಾರ್ಯರು.

ಶುಕ್ರಾಚಾರ್ಯ ಬಲಿಯ ಪಕ್ಕದಲ್ಲಿಯೇ ನಿಂತುಕೊಂಡು ಕಿವಿ ಕಚ್ಚುವುದನ್ನು ನಿರೀಕ್ಷಿಸಿದ್ದ ವಿಷ್ಣುವಿಗೆ ಇದು ಸ್ವಲ್ಪ ಆಶ್ಚರ್ಯ ಎನಿಸಿತು.

''ಹೌದು ಮೂರು ಅಡಿ ನೆಲವನ್ನು ಕೇಳಿದೆ.''

''ಸರಿ. ನೀನು ವಿದ್ಯಾರ್ಥಿ ಅಲ್ಲವೇ? ಓದು ಬರಹ ಬಲ್ಲವನು. ನಿನ್ನ ಬೇಡಿಕೆಯನ್ನು ಬರಹರೂಪದಲ್ಲಿ ಕೊಡು''.

ವಾಮನ ಬರೆದುಕೊಟ್ಟ. ಅದಕ್ಕೆ ತಮ್ಮ ಹಸ್ತಾಕ್ಷರ ಹಾಕಿ ಬೀರಬಲ್ಲನ ಕಡೆಗೆ ಸರಿಸಿದರು ಆಚಾರ್ಯರು.

''ಆಚಾರ್ಯರೇ, ಈ ಬೇಡಿಕೆ ನೆಲದ ಬಗೆಗೆ ಇದೆ. ನೆಲ ಎಂದರೆ ಕ್ಷೇತ್ರ. ಅದನ್ನು ನಾವು ಚದರು ಅಡಿಗಳಲ್ಲಿ ಅಳೆಯುತ್ತೇವೆ. ಈ ಬಾಲಕ ಬರಿ ಮೂರು ಅಡಿ ಎಂದು ಬರೆದಿದ್ದಾನೆ. ಅದು ಉದ್ದಳತೆಯ ಯೂನಿಟ್ ಆಯಿತು'' ಎಂದು ಆಕ್ಷೇಪಣೆ ಎತ್ತಿದ ಬೀರಬಲ್.

''ಪಾಪ ಅವನ ತರಗತಿಯಲ್ಲಿ ಇನ್ನೂ ಕ್ಷೇತ್ರಫಲ ಲೆಕ್ಕ ಮಾಡುವ ಪಾಠ ಆಗಿಲ್ಲವೇನೋ. ಮಗೂ ನಿನ್ನ ಅಹವಾಲಿನಲ್ಲಿ ದೋಷವನ್ನು ಸರಿಪಡಿಸಬೇಕು. ಅದನ್ನು ಮೂರು ಚದರ ಅಡಿ ಎಂದು ಮಾಡಬೇಕೋ ಅಥವಾ ಮೂರು ಅಡಿಯ ಚದರ ಎಂದು ಮಾಡಬೇಕೋ ಹೇಳು'' ಎಂದರು ಶುಕ್ರಾಚಾರ್ಯರು.

ವಾಮನನಿಗೇ ಏನು ಹೇಳುಬೇಕೋ ತೋಚಲಿಲ್ಲ. ಎಗರಿ ಬಿದ್ದ ಬೇಲ್ಸ್‌ಗಳನ್ನು ನೋಡುವ ಬ್ಯಾಟ್ಸ್‌ಮನ್‌ನಂತೆ ಪಿಳಿ ಪಿಳಿ ಕಣ್ಣು ಬಿಟ್ಟ! ಆಕಾಶದೆತ್ತರಕ್ಕೆ ಬೆಳೆದು ನಿಲ್ಲಬೇಕೆಂದಿದ್ದ ಅವನ ಯೋಜನೆ ಒಂದು ಕ್ಷುಲ್ಲಕ ತಪ್ಪಿನಿಂದಾಗಿ ಮಣ್ಣು ಮುಕ್ಕಿತ್ತು. ''ಮೂರಡಿ ಚದರದ ನೆಲ ಯಾವನಾದರೂ ಸಮಾಧಿ ಮಾಡುವವನಿಗೆ ಉಪಯೋಗ ಬಂದೀತು. ಅಂಥವನನ್ನು ಕರೆದುಕೊಡಿ'' ಎಂದು ಮನಸ್ಸಿನಲ್ಲಿಯೇ ಸಿಡಿಮಿಡಿಗೊಳ್ಳುತ್ತ, ಹೊರಗೆ ಕೋಪವನ್ನು ತೋರಿಸಿಕೊಳ್ಳಲಾರದೆ ಅಲ್ಲಿಂದ ಕಾಲ್ಕಿತ್ತ ವಾಮನ.

ಶುಕ್ರಾಚಾರ್ಯರಿಗೆ ಹಿಗ್ಗೋ ಹಿಗ್ಗು ತಮ್ಮ ಯೋಜನೆ ಫಲಪ್ರದವಾದದ್ದಕ್ಕೆ. ಬಲಿಯ ಕಡೆಗೆ ಮುಖ ತಿರುಗಿಸಿ ಕಣ್ಣು ಹೊಡೆದರು. ಅದೇ ವೇಳೆಗೆ ನಮ್ಮ ಪ್ರೆಸ್ಸ್ ರಿಪೋರ್ಟರ್ ತನ್ನ ಕ್ಯಾಮೆರಾ ಕ್ಲಿಕ್ಕಿಸಿದ. ಅವನೊಬ್ಬ ಅತಿಯಾದ ಆತ್ಮ ವಿಶ್ವಾಸದ ಪ್ರಾಣಿ. ತಾನು ತೆಗೆದ ಫೋಟೋ ನೋಡಿಕೊಂಡು 'ಶುಕ್ರಾಚಾರ್ಯರಿಗೆ ಒಂದೇ ಕಣ್ಣು' ಎಂದು ತಪ್ಪು ಮಾಹಿತಿಯನ್ನು ಪ್ರಚಾರ ಮಾಡಿಬಿಟ್ಟ.

ನೀತಿ: ಮುಗಿಲೆತ್ತರಕ್ಕೆ ಬೆಳೆಯುವ ಮಹತ್ವಾಕಾಂಕ್ಷೆ ಇದ್ದವರು ಎಂತಹ ಕಿರಿಯ ಸಂಗತಿಯನ್ನು ಕೂಡ ಕ್ಷುಲ್ಲಕವೆಂದು ಕಡೆಗಣಿಸಬಾರದು.

★★★

ಕಸದ ತೊಟ್ಟಿಯಲ್ಲಿ ಹತ್ತು ನಿಮಿಷ

- ಶ್ಯಾಮಲಾ ರವಿಶಂಕರ್

ಹಾದಿ ಬದಿಯಲ್ಲಿನ ಕಸದ ತೊಟ್ಟಿಯ ಮುಚ್ಚಳವನ್ನು ನಾನು ಮೆಲ್ಲಗೆ ತೆರೆದು ಹೊರಗೆ ಇಣುಕಿದೆ. ನಾನೇನು habitual ಆಗಿ ಕಸದ ತೊಟ್ಟೀಲಿ ಧುಮುಕೋವ್ಪಲ್ಲ! ಅವತ್ತು ನನ್ನ ಕರ್ಮಕ್ಕೆ ಬೇರೇನೂ ಜಾಗ ಸಿಗದೆ ಅಲ್ಲಿ ಅವತಿಟ್ಟುಕೊಳ್ಳಬೇಕಾಯಿತು. ಧುಮುಕಿದ ಮೇಲೆ ಯಾವಾಗಲಾದರೂ ಮೇಲೆ ಬರಲೇ ಬೇಕಲ್ಲಾ, ಆ ಪ್ರಯತ್ನದಲ್ಲಿ ಹೊರಗೆ ಇಣುಕಿದೆ.

ನೀವೇನೂ ಮೂಗು ಮುಚ್ಚಿಕೊಳ್ಳಬೇಕಿಲ್ಲ. ಮುಚ್ಚಿಕೊಂಡರೂ ವಾಸನೆಗಂತೂ ಅಲ್ಲ ಆದರೆ ಘಾಟಿಗೆ ಮುಚ್ಚಬೇಕು. ಅಂಥಾ ಕಸದ ತೊಟ್ಟೀಲಿ ನಾನು ಹತ್ತು ನಿಮಿಷ ಇರಬೇಕಾಗಿ ಬಂತು ಒಂದು ದಿನ. ನಾನಿರುವ ಹೈಟೆಕಾಬಾದಿನ ಕಸದ ತೊಟ್ಟಿಗಳೂ ಆಧುನಿಕ ಮಾಲುಗಳೇ! ಅವಳಿ ಬಾತ್‌ಟಬ್‌ಗಳಂತೆ ಇದ್ದು ದ್ವಿಭಾಗೀ ಮುಚ್ಚಳ ಹಿಂಜ್‌ನಿಂದ ಅಳವಡಿಸಲ್ಪಟ್ಟಿವೆ. ಹಾಗೂ post boxನ ಮೂತಿ ಹಾಗೇ ಈ ಮುಚ್ಚಳಗಳು, ಕಸ ಸ್ವೀಕರಿಸಿದ ಒಮ್ಮೆಗೇ ಸ್ವಸ್ಥಾನೇ ಪ್ರತಿಷ್ಠಾಪಯಂತಿ ಅಂತಾಗುತ್ತವೆ, ಇದರಲ್ಲಿ ನನ್ನ ಪ್ರವೇಶ ಪ್ರಕರಣ ಇಂತು:

ಕಾನ್ಫರೆನ್ಸ್‌ಗೆಂದು ಹೊರ ಊರಿಗೆ ಹೋಗಿ ಹಿಂತಿರುಗುವಾಗ ನನ್ನ ರೈಲು 50 ನಿಮಿಷ ಮುಂಚಿತವಾಗಿ, ಅರ್ಥಾತ್ ಬೆಳಗಿನ 4 ಘಂಟೆಗೂ ಸ್ವಲ್ಪ ಮುಂಚಿತವಾಗಿ ತಲುಪಿತು. ನಿದ್ದೆಯ ಮಂಪರಿನಲ್ಲೇ ಆಟೋ ಹಿಡಿದು ಮನೆಯ ಕಡೆ ಮರಳುತ್ತಿದ್ದಾಗ ಆಟೋ ಡ್ರೈವರ್ 'ಬ್ರೇಕ್‌ಫೇಲ್ ಆಯಿತು ಇಳಿಯಿರಿ' ಅಂದ್ದಾಗೆ ನೆನಪು. ಇನ್ನೂ ½ ಕಿ.ಮೀ. ದೂರ ತಾನೇ ಮನೆ, ನಡೆದರೆ ಆಯ್ತು ಅಂದು ಅವನಿಗೆ ದುಡ್ಡು ತೆತ್ತು ನಡೆದೆ. ಡರ್‌್ರ-ಢಣ್ ಎಂದು ಶಬ್ದ ಮಾಡುತ್ತಾ ಆಟೋ ಹಾರಿ ಹೋದಾಗ ಒಮ್ಮೆಲೇ ನನಗೆ ಜ್ಞಾನೋದಯವಾಗಿ ನನ್ನ ಪುಲ್‌ಮನ್ ಬ್ಯಾಗೇಜ್ ಆಟೋನಲ್ಲಿ ಮರೆತನಲ್ಲಾ ಎಂದು. ಆಟೋ ಹಿಂದೆ ಓಡಿದೆ. ನನ್ನ ಪ್ರಯತ್ನ ವಿಫಲವಾಗಿ ಜೊತೆಗೆ ನನ್ನ ಹಿಂದೆ ಬೀದಿ ನಾಯಿ ಓಡಿ ಬಂದದ್ದರಿಂದ ಇನ್ನೂ ಬೇಗ, ಒಲಂಪಿಕ್ಸ್‌ಗೆ ಅಭ್ಯಾಸವೇನೋ ಅನ್ನೋ ಹಾಗೆ, ಓಡಿದೆ. ಅಲ್ಲಿನ ಒಂದು ಅಡ್ಡ ರಸ್ತೆಯಲ್ಲಿ ಯಾರೋ 'ಪಕಡೋ ಓ ಔರತ್ ಕೋ' ಅಂತ ಒಬ್ಬಾಕೆ ಹಿಂದೆ ಕೂಗ್ತಾ ಓಡ್ತಿದ್ರು. ಇದನ್ನು ಕೇಳಿಸ್ಕೊಂಡನೇನೋ ಅಲ್ಲಿ ಇನ್ನೊಬ್ಬ ಧಡೂತಿ ಆಸಾಮಿ ನನ್ನ ಹಿಂದೆ ಓಡುವ ಪ್ರಯತ್ನದಲ್ಲಿ ತೊಡಗಿದ! ನಾನು ಮುಂದೆ ಹೋಗಿ "Z' ಆಕಾರದಲ್ಲಿ ರೋಡುಗಳನ್ನು ಅಟ್ಟಿ ಕಡೆಗೆ ಕ.ತೊ.ಯಲ್ಲಿ ಧುಮುಕುವ ಯತ್ನದಲ್ಲಿ ಯಶಸ್ವಿಯಾದೆ! ಆ ಆಸಾಮಿಯ ಸ್ಥೂಲಕಾಯ ನನಗೆ ಓಟ ಕೀಳಲು ಸಹಾಯ ಮಾಡಿತು.

ಒಳಗೆ ಇಳಿದ ಮೇಲೆ ನನ್ನ ಪರಿಸರವನ್ನು ಪರಿಶೀಲಿಸದೆ. ಅದು ರಾಸಾಯನಿಕ ಗೊಬ್ಬರದ ಸೀಲ್ and ಸೇಲ್ಸ್ ಆಫೀಸಿನ ಮುಂದಿದ್ದುದರಿಂದ ವಿಚಿತ್ರ ವಾಸನೆಗಳಿಂದ ಕೂಡಿತ್ತು. ಇದು ಸಲ್ಫೈಡ್ ಆ, ಫೀನಾಲಿಕ್ ಕಾಂಪೌಂಡ್ಸ್ ಆ ಎಂದು ಆಲೋಚಿಸುತ್ತಾ ಸೀನುತ್ತಾ ಹತ್ತು ನಿಮಿಷ ಕಳೆದಿರಬಹುದು. ನಾಯಿಯಂತು ಎಲ್ಲೋ ಹೊರಟು

ಹೋಗಿತ್ತು. ನಮ್ಮ ಧಡೂತಿ ಆಸಾಮಿ ಕೂಡ ಇಷ್ಟು ಹೊತ್ತಿಗೆ ಹೊರಟ್ಹೋಗಿರ್ತಾನೆ. ಅಂತೂ ಖಚಿತ ಪಡಿಸೋಣವೆಂದು ಇಣುಕಿದೆ. ಹಾಗೆ ಒಮ್ಮೆಗೇ ಜಿಗಿದು ಹೊರಗೆ ಬಂದು ಮೈ ಕೊಡವಿಕೊಂಡೆ ಮನೆಯ ಕಡೆ ನಡೆದೆ. 10 ಸೆಕೆಂಡುಗಳಾಗಿರಬಹುದು. ಧೋಪ್ಪನೆ Liberty statueವಿನ ಕೈಯೇ ನನ್ನ ಭುಜದ ಮೇಲೆ ಬಿದ್ದಿತೆಂಬ ಭಾವನೆ! ನೋಡಿದರೆ ಧಡೂತಿ ಆಸಾಮಿ ವಾಪಸ್ at my back again! ಬೆಚ್ಚಿದೆ, ಅಂದರೆ ಆ ತರಹ ಹಿಂದೆಂದೂ ಬೆಚ್ಚಿರಲಿಲ್ಲ ನಾನು.

''ಯಮ್ಮೋ, ನಂಗೊತ್ತಿತ್ತು, ನೀನ್ವಸಿ ದೂರನೇ ವಾಗಿರ್ತೀಯಾ ಅಂತ ನಡಿ, ನಡಿ'' ಅಂತ ಕರ್ಕಶ ಧ್ವನಿಯಲ್ಲಿ ವದರಿದ.

ಪರ್ವಾಗಿಲ್ಲ ನಾನೂನೂವೇ ಬೇಗಲೇ ಚೇತರ್ಸ್ಕೊಂಡೆ.

''ಕಾಣ್ತಾಕಿಲ್ವಾ, ನಡೀತಿರೋದು, ನಡಿ, ನಡೀ ಅಂತ ಹೇಳೋವ್ನು ನೀನ್ಯಾರು.''

'ಯಮ್ಮೋ, ಯಮ್ಮೋ, ಜ್ಯಾದಾ ಹೋಶ್ಯಾರೀ ತೋರಿಸ್ಬೇಡ, ನಡಿ, ಟೇಸನ್‌ತಾವ'

''ಟೇಸನ್‌ನಿಂದಲೆ ಬರ್ತಿವ್ನಿ, ಅದೇ... ರೈಲ್ವೇ ಸ್ಟೇಶನ್'' ಅಂದೆ.

''ಇವೆಲ್ಲಾ ಡೈಲಾಗ್ಸುಗಳೂ ನನ್ತಾವ ನಡ್ಯಾಕಿಲ್ಲಾ, ಪೋಲೀಸ್ ಟೇಸನ್ ಕಡೆ ವಾಗಾನ'' ಅಂದ. ಇಷ್ಟು ಹೊತ್ತಿಗೆ I was in total command of myself.

''ಬೇಜಾರಾಗತ್ತಾ ಒಬ್ಬನೇ ಹೋಗೋಕ್ಕೇ. ಕಳ್ಳರು ಹೋಗಲೇಬೇಕಲ್ಲಾ ಒಂದಲ್ಲಾ ಒಂದಿನ.''

''ಯಮ್ಮೋ, ನಂಗೇ ಯೋಳ್ಕೊಡ್ತೀಯಾ? ನಾನೊಬ್ಬ ಪೋಲೀಸಪ್ಪ, ನಿನ್ನ ನಮ್ಮ ಎಸ್.ಐ.ಸಾಬ್‌ಗೆ ಒಪ್ಪಿಸ್ಬಿಟ್ರೆ ನನ್ನ ಸಿಫ್ಟ್ ಡೂಟೀ ಮುಗೀತು ಇವತ್ತು''

''ನೀನೂ, ಪೋಲೀಸಪ್ಪ? ನನ್ನ ಯಾರ್‍ಯಾರಿಗೋ ಒಪ್ಪಿಸೋಕೆ ಆಗೋಲ್ಲಾ. ಯಾಕೆ ಗೊತ್ತಾ? 30 ವರ್ಷಗಳ ಹಿಂದೇನೇ ನಮ್ಮಪ್ಪ ನನ್ನನ್ನ ನಮ್ಮೆಜಮಾನ್ರಿಗೆ ಒಪ್ಪಿಸಿ ಆಯ್ತು. ಬೇರೆ ಯಾರಾದ್ರೂ ಚಿಕ್ಕ ಉಡಿಗೀರನ್ನ ಹಿಡ್ಕೊಂಡ್ಹೋಗು. ಅವರ ಕಪಾಳ ಮೋಕ್ಷನೂ ಸ್ವೀಕರಿಸು'' ಅಂದೆ.

''ಯಮ್ಮೋ. ನಿನ್ನ ಮಾತಿನ ಶ್ಟೈಲೇ ಶ್ಟೈಲು! ನಿಮ್ಮ ತರವೆಲ್ಲಾ ಇಂಗೇ ಮಾತಾಡಿದ್ರೂ ನಿನ್ದೇ ಫೆಶಲ್ ಶ್ಟೈಲು! ನಿನ್ನ ಈ ವೈಕಾರ ನೋಡು, ಆ ಚೂಡಿದಾರೇನು? ಅದಕ್ಕೆ ಹೊರ ಹೊಡ್ಕಂಡಿರೋ ಶಾಲೂ ಏನು! ಇದೆಲ್ಲಾ ನೋಡಿದ್ರೇನೇ ನಮ್ಗೆ ಗೊತ್ತಾಗ್ತೈತೆ.''

''ನನ್ನ ಇಷ್ಟ ಬಂದ್ಹಂಗೆ ನಾನು ಡ್ರೆಸ್ ಮಾಡ್ಕೋತೀನಿ, ನಿನಗ್ಯಾಕವೆಲ್ಲಾ? ಆದ್ರೂ ಕೇಳು, ಪೋಲೀಸಪ್ಪ. ನಾನು ಯಾವಾಗ್ಲೂ ಸೀರೇನೆ ಉಡೋದು. ರೈಲು ಪ್ರಯಾಣಕ್ಕೆ ಅನುಕೂಲವಾಗ್ಲಿ ಅಂತ ಚೂಡಿದಾರು ಹಾಕಿದ್ದೀನಿ. ಇನ್ನೂ ಕೇಳು, ಈ ಶಾಲನ್ನು ಮೆಚ್ಚಿಕೊಂಡೆಯೆಲ್ಲಾ, ಇದು ನನ್ನನ್ನು ನಿಮ್ಮೂರಿನ ಸಾಹಿತ್ಯ ಸಂಘದವರು ಸನ್ಮಾನ ಮಾಡಿ ಕೊಟ್ಟಿದ್ದು.''

''ಓಹೋ, ನಿನಗೆ ಶನ್ಮಾನ ಬೇರೆ ಮಾಡ್ತಾರಾ? ಹಾಗಾದ್ರೆ, ನಿನಗೆ ಇನ್ನೂ ಶನ್ಮಾನ ಮಾಡ್ತೀವಿ ಟೇಸನ್‌ನಲ್ಲಿ. ನಿನ್ನವತಾರ ನೋಡಿದ್ರೆ''....

ಈಗ ನಿಜವಾಗ್ಲೂ ನನಗೆ ಹುಚ್ಚೇಳ್ತು!

''ನಡಿ, ಸ್ಟೇಶನ್‌ಗೆ, ನಿನಗೂ ನನಗೋ ಸತ್ಕಾರ-ಸನ್ಮಾನ'' ಅಂತ ಕಿರುಚೇಬಿಟ್ಟೆ.

ಅಷ್ಟರಲ್ಲಿ ಬೀಟ್ ಪೋಲೀಸ್ ವ್ಯಾನ್ ಹೋಗ್ತಿತ್ತು. ಅದನ್ನ ನಿಲ್ಲಿಸಿ, ''ಇವನನ್ನ ಸ್ಟೇಶನ್‌ಗೆ ಕರ್ಕೊಂಡ್ಹೋಗಿ, ನಾಲ್ಕು ಒದೆ ಕೊಡಿ'' ಅಂದೆ.

ಒಳಗಡೆ ಇದ್ದ ಪೋಲೀಸ್+ಡ್ರೈವರ್ ಇವನ ಗೆಳೆಯರೇನೋ ಪಿಸಿ ಪಿಸಿ ಅಂತ ಮಾತಾಡ್ಕೊಂಡು ಹಲ್ಕಿರಿದು.

''ನಡೀರಿ, ಮೇಡಂ ಯಾವ್ದೂನೂ ನಮ್ಮ ಎಸ್.ಐ. ಸಾಬ್ ನಿರ್ಧರಿಸ್ತಾರೆ'' ಅಂದ್ರು.

''ನನಗೇನು ಎಸ್.ಐ. ಅಂದ್ರೆ ಭಯಾನಾ, ನಡೀರಿ'' ಅಂತ ಜೀಪ್‌ನಲ್ಲಿ ಜಿಗಿದೇಬಿಟ್ಟೆ.

ಪೋಲೀಸ್ ಸ್ಟೇಶನ್‌ನಲ್ಲಿ ಇಳಿದ ಕೂಡಲೆ ಸಧ್ಯ, ಬೇಡಿ ಒಂದನ್ನ ಹಾಕ್ಲಿಲ್ಲ. ಅಷ್ಟೇ ನಿಕೃಷ್ಟವಾಗಿ ನನ್ನನ್ನ ಕರಕೊಂಡು ಒಳ ಹೊಕ್ಕರು.

ಅಲ್ಲಿನ ಎಸ್.ಐ.ಸಾಬ್ ನಿದ್ದೆಯಿಂದ ಜಗ್ಗನೆದ್ದ. ಕಣ್ಣುಜ್ಜಿಕೊಂಡ. 'ರೇ, ಪೊಟ್ಟೇ, ಚಾಯ್ ಲಾವೊರೇ - ದೋ ಚಾಯ್' ಎಂದರಚಿದ.

ಅಲ್ಲೇ ಗ್ಲಾಸಿನಲ್ಲಿದ್ದ ನೀರನ್ನು ಮುಖಕ್ಕೆರಚಿಕೊಂಡ, ಮುಖ ಒರೆಸಿಕೊಂಡ. All the while starting at me. ಒಂಥರಾ ಮುಜುಗರ ಆಗ್ತಿತ್ತು ನನಗೆ. ಈ ಮಧ್ಯದಲ್ಲಿ ನಾನು ಬೀದಿಯಲ್ಲಿ ದಂದೆ ನಡೆಸಿ ಸಿಕ್ಕಿ ಬೀಳೋವಾಗ ಕಸದ ತೊಟ್ಟೀಲಿ ಅವಿತುಕೊಂಡಿದ್ದಾಗ ಇವರು ನನ್ನನ್ನು ಹಿಡಿದು ತಂದರೆಂದು ಹೇಳಿಕೊಂಡರು. ಅದನ್ನು ಕೇಳಿ ನನಗೆ ನಗೂ ಅಂದ್ರೆ ನಗು! ಗಟ್ಟಿಯಾಗಿ ನಕ್ಕುಬಿಟ್ಟೆ. ಅದಕ್ಕೆ ಈಗ ಹುಚ್ಚಿಯ ಹಾಗೆ ನಟಿಸುತ್ತಿದ್ದೇನೆಂದೂ ಹೇಳಿಬಿಟ್ಟರು! ಅಷ್ಟರಲ್ಲಿ ಟೀ ಬಂತು. ನನಗೂ ಟೀ ಕುಡಿಯೆಂದ ಎಸ್.ಐ. ಸಾಬ್.

ಥ್ಯಾಂಕ್ಸ್ ಹೇಳಿ ಟೀ ಕುಡೀತಿದ್ದ ನನ್ನನ್ನುದ್ದೇಶಿಸಿ ''ನೀವು ಶ್ಯಾಮಲಾ ಮೇಡಂ ಅಲ್ವೆ? ನಾನು ನಿಮ್ಮ ಸ್ಟೂಡೆಂಟ್ 15 ವರ್ಷಗಳ ಹಿಂದೆ. ಇಷ್ಟು ವರ್ಷಗಳಲ್ಲೂ ನೀವು ಕಿಂಚಿತ್ತೂ ಬದಲಾಗಲಿಲ್ಲವಲ್ಲಾ?! ಅದಕ್ಕೇ ನಿಮ್ಮನ್ನು ನೋಡ್ತಿದ್ದೆ ಹಾಗೆ. ಈ ತರಲೆಗಳೇ ಹೀಗೆ. ಹೋಗಿ ಇದನ್ನು ಸೀರಿಯಸ್ಸಾಗಿ ತಗೋಬೇಡಿ. ಸಾರಿ ವೆರಿ ಸಾರಿ. ಬನ್ನಿ, ಅಲ್ಲಾ, ಹೋಗಿ, ಬರಬೇಡಿ ಇಲ್ಲಿಗೆ'' ಎಂದ.

ಆ ಧಡೂತಿ ಆಸಾಮಿಗೆ ತಲೆ ಮೇಲೆ ಮೊಟಕಿದ. ''ನಿನಗೆ ಬುದ್ಧಿ ಇಲ್ಲ, ಅದು ಬರೋದೂ ಇಲ್ಲ'' ಎಂದ.

ನಾನು ನನ್ನ ಸೂಟ್‌ಕೇಸ್ ಕಳೆದು ಹೋದ ಬಗ್ಗೆ ದೂರು ನೀಡಿದೆ. ''ನಿಮ್ಮ ಆಶೀರ್ವಾದದಿಂದ ಇಷ್ಟರ ಮಟ್ಟಿಗೆ ಮುಂದೆ ಬಂದಿದ್ದೇನೆ ಇನ್ನೂ ಮುಂದೆ ಬರುವಂತೆ ಆಶೀರ್ವಾದ ಮಾಡಿ ಎಂದು ನಮಸ್ಕಾರ ಮಾಡಿ ಅದೇ ಜೀಪಿನಲ್ಲಿ ನನ್ನ ಮನೆ ಮುಟ್ಟಿಸಿದಾಗ ಬೆಳಕು ಹರಿದಿತ್ತು.

★★★

ತಿರುಮಂತ್ರ

- ಧ್ಯುತಿ

ಒಂದು ವರ್ಷದ ನಮ್ಮ ಮೊಮ್ಮಗನಿಗೆ ಇನ್ನೂ ಕುಳಿತುಕೊಳ್ಳಲು ಸಾಧ್ಯವಾಗಿಲ್ಲ; ಕಾರಣ-ಸ್ನಾಯುಗಳು ದುರ್ಬಲವಾಗಿವೆಯಂತೆ ಎಂದು ತಿಳಿದಾಗ ನನಗೆ ಸ್ವಲ್ಪ ಆತಂಕವಾಯಿತು. ಆ ಮಗು ಸೃಷ್ಟಿಸುತ್ತಿರುವ ಆತಂಕ ನಮಗೆ ಹೊಸದೇನೂ ಅಲ್ಲವೆನ್ನಿ. ಹುಟ್ಟಲೋ ಬೇಡವೋ ಎನ್ನುತ್ತಲೇ ಹುಟ್ಟಿ, ನಾಮಕರಣದ ದಿನವೇ ಬದುಕಲೋ ಬೇಡವೋ ಎಂದು ಯೋಚಿಸಿ ಬದುಕಿ ನಾವು ಆಗಾಗ ಕಳವಳಗೊಳ್ಳುವಂತೆ ಮಾಡಿದ ಮಗು ಈಗ ಮತ್ತೊಮ್ಮೆ ಆತಂಕಗೊಳ್ಳುವಂತೆ ಮಾಡಿತ್ತು. ಮಗುವನ್ನೊಮ್ಮೆ ನೋಡಿ ಬರೋಣವೆಂದು ನಾವು ಅಹ್ಮದಾಬಾದ್‌ಗೆ ಹೊರಟೆವು. ತಾಯಿಯ ತೋಳ್ತೆಕ್ಕೆಯಲ್ಲೇ ಇದ್ದರೂ ಕೈಚಾಚಿ, ಹಸನ್ಮುಖ ಮಾಡಿ ಮಗು ನಮ್ಮನ್ನು ಸ್ವಾಗತಿಸಿದಾಗ ನಮಗೆ ಸ್ವಲ್ಪ ಸಮಾಧಾನವಾಯಿತು. ನರಪೇತಲನಾಗಿದ್ದರೂ ತನ್ನ ಹಸನ್ಮುಖದಿಂದಲೇ ಎಲ್ಲರ ಸ್ನೇಹ ಸಂಪಾದಿಸಿದ್ದಾನೆ ಎಂದು ತಿಳಿದಾಗ ಸಂತೋಷವೂ ಆಯಿತು. ಮಾಂಸಖಂಡಗಳಲ್ಲಿ ಶಕ್ತಿಯಿಲ್ಲ ಎನ್ನುವುದನ್ನು ಬಿಟ್ಟರೆ ಉಳಿದೆಲ್ಲ ವಿಷಯಗಳಲ್ಲಿ ತುಂಬಾ ಚೂಟಿಯಾಗಿದ್ದಾನೆ ಅನಿಸಿತು. ಕಾಗೆ ಏನನ್ನುತ್ತದೆ, ನಾಯಿ ಹೇಗೆ ಬೊಗಳುತ್ತದೆ ಎಂಬ ಪ್ರಶ್ನೆಗೆಲ್ಲಾ ತಟ್ಟನೆ ಉತ್ತರಿಸಿತು. ಕಣ್ಣು, ಮೂಗು, ಬಾಯಿ, ಕಿವಿ, ತಲೆ, ಎಲ್ಲದರ ಜಾಗವನ್ನು ಪ್ರಶ್ನೆ ಕೇಳಿದೊಡನೆ ಮುಟ್ಟಿಕೊಂಡು ತೋರಿಸಿ ಅದರದರ ಸ್ಥಾನಗಳನ್ನು ನಿರ್ದೇಶಿಸಿತು. ನನಗೆ ಸಮಾಧಾನ ಮಾಡಿ ಸರಿ; ಇನ್ನೂ ಕೆಲವು ತಿಂಗಳು 'ಉರುಳುಸೇವೆ' ಮಾಡಿಕೊಂಡಿರಲಿ; ಸ್ನಾಯುಗಳಿಗೆ ಶಕ್ತಿ ಬಂದರೆ ತಾನೇ ಎದ್ದು ಕುಳಿತುಕೊಳ್ಳುತ್ತಾನೆ ಎಂದುಕೊಂಡೆ. ಕೆಲಹೊತ್ತಿನ ತನಕ ಅದರ ಆಟಪಾಟಗಳನ್ನು ವೀಕ್ಷಿಸುತ್ತಿದ್ದ ನನಗೆ ಅದು ಆಡಬಹುದಾದ ಮತ್ತೊಂದು ಆಟದ ರೀತಿ ತಲೆಗೆ ಹೊಳೆಯಿತು. ಕೆಳಗಿನ ತುಟಿಯ ಮೇಲೆ ಬೆರಳಿನಿಂದ ಮೀಟುತ್ತ ಬ್ರುವ್ ಬ್ರುವ್ ಎಂದು ಮಕ್ಕಳು ಮಾಡುತ್ತಾರಲ್ಲ; ಅದನ್ನು ಮಾಡಿ ತೋರಿಸಿದೆ. ತಕ್ಷಣ ಮಗು ಅದನ್ನು ಅನುಕರಣೆಗೆ ಮಾಡಿತು. ಒಂದು ಬೆರಳಿನಿಂದ ಮೀಟಲು ಅದಕ್ಕೆ ಸಾಧ್ಯವಾಗಲಿಲ್ಲವೇನೋ! ತನ್ನ ಪುಟ್ಟ ಅಂಗೈಯನ್ನೇ ಕೆಳಗಿನ ತುಟಿಯ ಬಳಿ ತಂದು ಬಬಬಬ ಅಂದಿತು. ಆ ಆಟ ಅದಕ್ಕೆ ಇಷ್ಟವಾಗಿರಬೇಕು. ಅದೇ ಆಟವನ್ನು ಆಗಾಗ ಆಡುತ್ತಲೇ ಇದ್ದಿತು.

ಆ ದಿನ ಸಂಜೆ 'ಕನ್ನಡ'ದ ಸ್ನೇಹಿತರೊಬ್ಬರು ನನ್ನ ಮಗನ ಮನೆಗೆ ಬಂದರು ಮಗು ಉರುಳುತ್ತಾ ಉರುಳುತ್ತಾ ಅವರ ಬಳಿ ಹೋಗಿ ಕೈಚಾಚಿ ಹಸನ್ಮುಖಿಯಾಗಿ ಎತ್ತಿಕೊಳ್ಳುವಂತೆ ಪ್ರೇರೇಪಿಸಿತು. ಆ ಸ್ನೇಹಿತರು ಅದನ್ನು ಎತ್ತಿಕೊಂಡು ಆಡಿಸಿದರು. ಅವರ ಕನ್ನಡಕ ಕಿತ್ತುಕೊಳ್ಳಲು ಹೋಯಿತು. ಅವರು ಕೈ ಬಿಡಿಸಿಕೊಂಡು ಕನ್ನಡಕ

ಸುಧಾರಿಸಿಕೊಂಡು ಮಗುವನ್ನು ಕೆಳಗಿಳಿಸಿದರು. ಮಗು ಎರಡು ಬಾರಿ ಉರುಳಿ ಜೋರಾಗಿ ಅತ್ತಿತು. ಮಗು ಕನ್ನಡಕ ಬೇಕೆಂದು ಅಳುತ್ತಿದೆ ಎಂದು ಆ ಸ್ನೇಹಿತರು ಭಾವಿಸಿ 'ನೀ ಅತ್ತ ಮಾತ್ರಕ್ಕೆ ಎಲ್ಲಾ ಕೊಟ್ಬಿಡೋಕೆ ಆಗುತ್ತಾ? ಕನ್ನಡಕ ಇಲ್ದೆ ಮನೇಗೆ ಹೇಗೆ ಹೋಗಲಿ' ಎಂದರು. ಮಗು ಜೋರಾಗಿ ಕಿರುಚುತ್ತಾ ನಾನು ಬೆಳಿಗ್ಗೆ ಹೇಳಿ ಕೊಟ್ಟಿದ್ದೆನಲ್ಲಾ ಬ್ರುವ್ ಬ್ರುವ್ ಆಟ... ಅದನ್ನು ಪ್ರದರ್ಶಿಸಿತು. ಅಂದರೆ ಪುಟ್ಟ ಅಂಗೈಯನ್ನು ಬಾಯಿಯ ಮೇಲಿರಿಸಿ (ಕೆಳಗಿನ ತುಟಿಯ ಮೇಲೆ ಕೈ ಇರಿಸಿಕೊಳ್ಳುವುದನ್ನು ಮರೆತಂತಿತ್ತು) ತಟ್ಟಿಕೊಳ್ಳುತ್ತಾ ಬ ಬ ಬ ಬ ಅಂದಿತು. ಮತ್ತೆ ಜೋರಾಗಿ ಕಿರುಚಿತು. ಮಗು ರಂಪ ಮಾಡುತ್ತಿದೆ ಎಂದುಕೊಂಡು ಆ ಸ್ನೇಹಿತರು ಕನ್ನಡಕ ಕಳಚಿ ಅದರ ಕೈಗಿತ್ತರು. ಮಗು ಅದನ್ನು ಬಿಸುಟು ಮತ್ತೆ ಉರುಳಿತು; ಅನಂತರ ಜೋರಾಗಿ ಕಿರುಚುತ್ತಾ ಬಬಬ ಆಟ ಪ್ರಾರಂಭಿಸಿತು. ಕೈಗೆ ಚೆಂಡು ಕೊಟ್ಟರೂ ಸಮಾನವಿಲ್ಲ; ಬೊಂಬೆ ಕೊಟ್ಟರೂ ಸಮಾಧನವಿಲ್ಲ. ಕೈಗೆ ಯಾವ ವಸ್ತುವನ್ನು ಕೊಟ್ಟರೂ ಬಿಸುಡುತ್ತಾ, ಉರುಳುತ್ತಾ, ಕಿರುಚುತ್ತಾ, ಬಬಬ ಎಂದು ಬಡಿದುಕೊಳ್ಳುತ್ತಾ, ಅದೇ ಆಟದ ಪುನರಾವರ್ತನೆ ಮಾಡುತ್ತಿತ್ತು. ಸ್ವಲ್ಪ ಗಾಬರಿಯಾದರೂ ನನಗೆ ಕಾಮನ ಹಬ್ಬದ ನೆನಪಾಯಿತು. ಕಾಮಣ್ಣ ಕಣ್ಣಗೆ, ಭೀಮಣ್ಣ ಬೆರಣಿ ಎಂದು ಹೇಳಿಕೊಳ್ಳುತ್ತಾ ಪುಂಡ ಮಕ್ಕಳು ಬಾಯಿ ಬಡಿದುಕೊಳ್ಳೋದು ಹೀಗೆ ಅಲ್ಲವಾ ಅಂತ. ಗುಜರಾತ್‌ನಲ್ಲಿ ಅಂಥ ಸಂಪ್ರದಾಯವಿಲ್ಲ; ಜೊತೆಗೆ ಕಾಮನ ಹಬ್ಬ ಕಳೆದು ಎರಡು ತಿಂಗಳ ಮೇಲಾಯ್ತಲ್ಲ; ಈಗೇಕೆ ಹೀಗೆ ಬಾಯಿ ಬಡಕೋಬೇಕು ಮರಿ? ಎಂದು ಮಗುವನ್ನು ಕೇಳಬೇಕೆನಿಸಿದರೂ ಮನೆಗೆ ಬಂದ ಮಿತ್ರರ ಮುಂದೆ ಅದನ್ನು ಆಡಲಿಲ್ಲ. ಮಗುವಿನ ಉರುಳು ಸೇವೆ, ಅಳು, ಬಾಯಮೇಲಿನ ಬಬಬಬ ಬಡಿತ ನಡೆದೇ ಇದ್ದಿತಾದ್ದರಿಂದ ನನ್ನ ಸೊಸೆ ಮಗುವನ್ನು ಎತ್ತಿಕೊಂಡು ಒಳಗೆ ಹೋದಳು. ಎಷ್ಟೋ ಹೊತ್ತಿನ ಮೇಲೆ ಮಗು ಸುಮ್ಮನೆ ಮಲಗಿತು. ಅದಕ್ಕೇನು ಹೊಟ್ಟೆ ನೋವಿತ್ತೋ; ಹಸಿವಿತ್ತೋ; ಅಥವಾ ಒಂದೆರಡು ಇರುವೆಗಳು ಮೈಮೇಲೆ ಹತ್ತಿದ್ದವೋ ಗೊತ್ತಾಗಲಿಲ್ಲ. ಮನೆಗೆ ಬಂದಿದ್ದ ಮಿತ್ರರು ಹೊರಟ ನಂತರ ನನ್ನ ಮಗ ನನ್ನ ಮೇಲೆ ರೇಗಿದ. 'ಇದೆಂಥ ಆಟ ಹೇಳಿಕೊಟ್ಟಮ್ಮ ಅವನಿಗೆ; ಬಂದವರ ಮುಂದೆ ಬಾಯಿಬಡಿಕೊಳ್ಳೋದನ್ನ' ಎಂದ. 'ನಾನು ಬಾಯಿ ಬಡಿದುಕೊಳ್ಳೋದನ್ನ ಹೇಳಿಕೊಡ್ಲಿಲ್ಲ ಕಣೋ; ಬ್ರುವ್ ಬ್ರುವ್ ಮಾಡೋದನ್ನ ಹೇಳ್ಕೊಟ್ಟೆ. ಅವನು ಅದನ್ನು ಪಲ್ಲಟ ಮಾಡಿ ಬಬಬಬ ಅಂತ ಕೈ ಬಾಯ ಮೇಲಿಟ್ಟು ಬಡಿಯುತ್ತಾ ಅಳುವಾಗ ಸೇರಿಸಿಕೊಂಡರೆ ನಾನೇನು ಮಾಡಕ್ಕಾಗತ್ತೆ' ಅಂದೆ. - ಮಗ, ಸೊಸೆ, ತಾತ ಮೂವರೂ ಸ್ವಲ್ಪ ನಕ್ಕರು. ದೇಹದಲ್ಲಿ ಶಕ್ತಿಯೇ ಇಲ್ಲದ ಚೋಟುದ್ದ ಮಗು, ಬಾಯಿ ದೊಡ್ಡದು ಮಾಡಿಕೊಂಡು ನಾನು ಹೇಳಿಕೊಟ್ಟ ಆಟದಿಂದಲೇ ನನನ್ನು ಆಡಿಸಿದ್ದಕ್ಕೆ ನನಗೂ ನಗು ಬಂತು.

★★★

ಬೀಗದಕ್ಕೆ ಬೀರಪ್ಪನ್

- ನಾಗೂಶ್ರೀ ಸೂರಿ

"ಅಂದ್ರೆ ಸಾರ್, ನೀವು ಹೇಳೋದು -- ಈ ಬೀಗದಕ್ಕೆ ಬೀರಪ್ಪನ್ ಸ್ವತಃ ಕಳ್ಳತನ ಮಾಡೊಲ್ಲ, ಪರ್ಸೆಂಟೇಜ್ ಇಸಕೊಂಡು ಕಳ್ಳರ ಗ್ಯಾಂಗುಗಳಿಗೆಲ್ಲ ಬೀಗದಕ್ಕೆ ಮಾಡಿಕೊಟ್ಟು ಸಹಾಯ ಮಾಡತಾ ಇದಾನೆ.

ಅವನನ್ನ ಹಿಡಿಯೋಕ್ಕೆ ಅಂತ ತಮಿಳುನಾಡಿನ ಪೋಲೀಸ್ನೋರು ಇನ್ನಿಲ್ಲದ ಹಾಗೆ ಟ್ರೈ ಮಾಡತಾ ಇದ್ದಾರೆ ಆದ್ರೆ ಅದು ಯಾವುದೂ ಈವರೆಗೆ click ಆಗಿಲ್ಲ. ಯಾಕೆ, ಈಚೆಗೆ ಒಂದು ಹದಿನೈದು ದಿನದ ಕೆಳಗೆ ಕೂಡ ಧರ್ಮಪುರೀನಲ್ಲಿ ಅವನ hide out ನ raid ಮಾಡಿದಾಗ ಇನ್ನೇನು ಸಿಕ್ಕೇಬಿಟ್ಟ ಅನ್ನೋವಾಗ ತಪ್ಪಿಸ್ಕೊಂಡುಬಿಟ್ಟಿದಾನೆ. ಈಗ ಬಂದಿರೋ intelligence report ಪ್ರಕಾರ ಅವನು ಅತ್ತೀಬೆಲೆ ಹತ್ರ ಬಾರ್ಡರ್ ದಾಟಿಕೊಂಡು ಕರ್ನಾಟಕಕ್ಕೆ ಬಂದಿದ್ದಾನೆ. ಮತ್ತೆ ವೇಷ ಬದಲಾಯಿಸ್ಕೊಂಡು ಅಲ್ಲೇ ಹತ್ರ ಇದ್ಯಲ್ಲ, ಎಂಥದೋ ಸ್ವಾಮೀಜೀ ಆಶ್ರಮ, ಅಲ್ಲಿ ಬರೋ ಸೋಮವಾರದಿಂದ ಶುರೂ ಆಗತಾ ಇರೋ Sport of Living ಅನ್ನೋ ಹೆಸರಿಂದು ಮೂರುವಾರದ್ದು residential programme ಸೇರಿಕೋತಾ ಇದಾನೆ - ಅದು ಮುಗಿಯೋಹೊತ್ತಿಗೆ ಅಲ್ಲಿ ತಮಿಳುನಾಡಿನಲ್ಲಿ ಕಾವು ಕೊಂಚ ಇಳಿದಿರತ್ತಲ್ಲ ಅಂತ ಅವನ ಲೆಕ್ಕಾಚಾರ.''

''ಕರೆಕ್ಟ್...''

''ಆದ್ರೆ ಸಾರ್, ರಾತ್ರೋ ರಾತ್ರಿ ಪಾವಗಡಕ್ಕೆ ಮೆಸೇಜ್ ಕಳಿಸಿ, ಉಟ್ಟಬಟ್ಟೇನಲ್ಲೇ ಬೆಂಗಳೂರಿಗೆ ಕರಸ್ಕೊಂಡು ನನ್ನ ಮುಂದೆ ಇದೆಲ್ಲ ಯಾಕೆ ಹೇಳತಾ ಇದ್ದೀರಿ ಅನ್ನೋದು ಅರ್ಥವಾಗತಿಲ್ಲ ...''

''ಯಾಕೇ ಅಂದ್ರೆ ಮುನಿಶಾಮಯ್ಯ ... ನೀವೂ ಕೂಡ ಆ ಪ್ರೋಗ್ರಾಂಗೆ ಹೋಗಿ ಸೇರಿಕೋಬೇಕು, ಮೈಯೆಲ್ಲಾ ಕಣ್ಣುಮಾಡಿಕೊಂಡಿದ್ದು ಅಲ್ಲಿ ಬಂದಿರೋರ ಪೈಕಿ ಆ ಬೀರಪ್ಪನ್ ಯಾರು ಅನ್ನೋದನ್ನ ಪತ್ತೆಹಚ್ಚಿ ನನಗೇ ಖುದ್ದಾಗಿ ಮೆಸೇಜ್ ಕಳಿಸಬೇಕು... ನಿಮ್ಮ ಪರವಾಗಿ ಆಗಲೇ ಮುನೀಶ್ ಅನ್ನೋ ಹೆಸರಿನಲ್ಲಿ ದುಡ್ಡುಕಟ್ಟಿ ರಿಜಿಸ್ಟರ್ ಮಾಡಿಸಿದ್ದಾಗಿದೆ ...''

''ಸಾರ್, ತಪ್ಪು ತಿಳಕೋಬೇಡಿ... ಈ ಕೆಲಸಾನ ಇಲ್ಲಿನೋರೇ ಯಾರಿಗಾದ್ರೂ ತಗಲುಹಾಕೊಕ್ಕೆ ಆಗತಿರಲಿಲ್ಲವಾ?''

''ಹಾಗೆ ಮಾಡಿದ್ದಿದ್ರೆ ಅಲ್ಲಿ ಯಾರಿಗಾದ್ರೂ ನಮ್ಮೋವರದ್ದು ಗುರುತು ಸಿಕ್ಕಿ ಕೆಲಸ ಗಬ್ಬೆದ್ದು ಹೋಗೋ ರಿಸ್ಕ್ ಇರತಿತ್ತಲ್ಲ, ಅದಕ್ಕೇ...''

''ನೀವು ಅಷ್ಟು ಹೇಳಿದ ಮೇಲೆ ... ಆಗಲಿ, ಸಾರ್... ಮತ್ತೆ ಈ ಬೀರಪ್ಪನ್‌ದು ಚಹರೆ ಬಗ್ಗೆ ಇನ್ನೂ ಏನಾದ್ರೂ ...?''

''ನಾಕೈದು ಹಳೇ ಫೋಟೋ ಏನೋ ಇದೆ. ಆದ್ರೆ ಅವನು ವೇಷ ಬದಲಾಯಿಸ್ಕೊಂಡು ಬಂದಿರತಾನಲ್ಲ ! ... ಆಳು ಸುಮಾರು ಐದೂವರಡಿ ಎತ್ತರ, ತೀರಾ ಸಣ್ಣಾನೂ ಅಲ್ಲ ತೀರ ದಪ್ಪಾನೂ ಅಲ್ಲ ಅನ್ನೋ ಥರ ಮೈಕಟ್ಟು ... ನಾಕೈದು ಭಾಷೆ ಮಾತಾಡೋಕ್ಕೆ ಬರತ್ತೆ . ಆಸಾಮಿ ಬಹಳಾನೇ ಹುಷಾರು - ಬಡಪೆಟ್ಟಿಗೆ ಸುಳುವು ಬಿಟ್ಟುಕೊಡೋಲ್ಲ.''

''ಹಾಗಂದ್ರೆ ಹ್ಯಾಗೆ ಸಾರ್? ... ಏನಾದ್ರೂ ಚಟಗಳು .. ಕುಡಿತ, ಹೆಣ್ಣಿನ ಚಪಲ ಅನ್ನೋವು ? ಬೇರೆ ಏನಾದ್ರೂ ವೀಕ್‌ನೆಸ್ಸುಗಳು?...''

''ಗೊತ್ತಿಲ್ಲ .. ಒಂದುವೇಳೆ ಇದ್ರೂನೂವೇ ಸ್ವಾಮೀಜೀ ಆಶ್ರಮದಲ್ಲಿ ...? ಬೇರೆ ಆಶ್ರಮಗಳಲ್ಲಿ ಹ್ಯಾಗೋ ಗೊತ್ತಿಲ್ಲ ಆದ್ರೆ ನೀವು ಹೋಗತಿರೋ ಕಡೆ ಆ ತೀಟೆಗಳನ್ನ ತೀರಿಸ್ಕೊಳ್ಳೋಕ್ಕೆ ಅವಕಾಶ ಇಲ್ಲ ಅಂತ ಎಲ್ಲರೂ ಹೇಳತಾರೆ... ಹಾ, ವೀಕ್‌ನೆಸ್ಸು ಅಂದಾಗ ನೆನಪಿಗೆ ಬಂತು. ಇವನದ್ದೂ ಒಂದು ಇದೆ - ಯಾರಾದ್ರೂ ಉಬ್ಬಿಸಿಬಿಟ್ಟಾಗ ಇಲ್ಲಾ ಇವನಿಗೇ ಯಾವಾಗಲಾದ್ರೂ ಮಸ್ತಿ ಏರಿದಾಗ 'ನಾನು ಅಲ್ಲಿ ಅದು ಹಂಗೆ ಮಾಡಿದ್ದೆ, ನಾನು ಇಲ್ಲಿ ಇದು ಹಿಂಗೆ ಮಾಡಿದ್ದೆ' ಅಂತ ಚನ್ನಾಗೇ ಕೊಚ್ಚಿಕ್ಕೋತಾನಂತೆ. ಆದ್ರೆ, ಈ ಪ್ರೋಗ್ರಾಂ ನಡೀತಿರೋ ಟೈಂನಲ್ಲಿ ಆಶ್ರಮದಲ್ಲಿ ಅಂಥಾದ್ದೇನಾದ್ರೂ ಸನ್ನಿವೇಶ ಬರುತ್ತೆ ಅನ್ನೋದು ನನಗೇನೋ ಅನುಮಾನ...''

''ಹೇಳೋಕ್ಕಾಗೊಲ್ಲ ಸಾರ್... ಬಂದ್ರೂ ಬರಬಹುದು... ಅದೇನೋ ಹೇಳತಾರಲ್ಲ, ಹುಟ್ಟುಗುಣ ಸುಟ್ರೂ ಹೋಗಲ್ಲ ಅಂತ, ಹಾಗೆ...''

''ಹ್ಞಾ, ಅಂದಹಾಗೆ ನಿಮ್ಮದೂ ಇದೆ, ಸುಟ್ರೂ ಹೋಗದೇ ಇರೋ ಅಂಥಾ ಒಂದು ಹುಟ್ಟುಗುಣ... ನಿಮಗೆ ಕೋಪ ಅನ್ನೋದು ಯಾವಾಗಲೂ ಮೂಗಿನಮೇಲೇ ಇರತ್ತೆ... ಕೋಪ ಬಂದಿರೋ ಟೈಂನಲ್ಲಿ ನೀವು ಏನು ಮಾತಾಡತಾ ಇದ್ದೀರಿ, ಏನು ಮಾಡತಾ ಇದ್ದೀರಿ ಅನ್ನೋದು ನಿಮಗೇ ಜ್ಞಾನ ಇರೋಲ್ಲ. ಹಿಂದಿನ ಪೋಸ್ಟಿಂಗ್‌ನಲ್ಲಿ ಜ್ಞಾಪಕ ಇದ್ಯಾ, ಲಾಕಪ್‌ಡೆತ್ ಕೇಸು ?...''

''ಇಲ್ಲದೇ ಏನು ಸಾರ್? ನೀವುಗಾನ ಬಂದು ಆವಾಗ ನನ್ನನ್ನ ಬಚಾವ್ ಮಾಡದೇ ಹೋಗಿದ್ರೆ ನಾನು ಏನಾಗತಿದ್ನೋ...''

''ಈ ಬೀರಪ್ಪನ್ ವಿಷಯದಲ್ಲಿ ಹಾಗೇನಾದ್ರೂ ಮಾಡಿಕೊಂಡ್ರೋ ಅಷ್ಟೆ... ನಿಮಗೆ ಏನಾಗತ್ತೆ ಅನ್ನೋದು ನಾನು ಹೇಳೋದು ಬೇಡ - ನೀವೇ ನೋಡತೀರ...''

★★★★★

Sport of Living ಪ್ರೋಗ್ರಾಮ್ ಉದ್ಘಾಟನೆ ಆದ ರಾತ್ರಿ ಅಬ್ಬ, ಅದೆಂಥಾ ಪಗದಸ್ತು ಊಟ ಇತ್ತು ಅಂತೀರಿ. ಮೂರುಮೂರು ಸ್ವೀಟು, ಫಸ್ಟ್‌ಕ್ಲಾಸ್ ಪುಲಾವು... ಪ್ರೋಗ್ರಾಂ ಇರೋ ಮೂರು ವಾರಾನೂ ಹಾಗೇ ಇರುತ್ತೇನೋ ಅಂತ ಎಲ್ಲರಿಗೂ ಆಸೆ ಹುಟ್ಟಿಸಿತ್ತು.

ಆದ್ರೆ ಮಾರನೇ ದಿನಾನೇ ಗೊತ್ತಾಗಿದ್ದು, ಅಳಿಯನ ಕುರುಡು ಎಂಥಾದ್ದು ಅನ್ನೋದು . ಕಾರ್ಯಕ್ರಮ ಮುಗಿಯೋದಿನದವರೆಗೂ ಕಾಫೀ, ಟೀ ಯಾವುದೂ ಇರೋಲ್ಲ - ಊಟ ಕೂಡ ಅಷ್ಟೆ , ಉಪ್ಪು ಖಾರ ಏನೂ ಇಲ್ಲದೇ ಇರೋ ಸಾತ್ವಿಕ ಆಹಾರ , ಅಂತ ಗೊತ್ತಾದಾಗ ಎಲ್ಲರೂ ಪಿಸಿಪಿಸಿ ಮಾತಾಡಿಕೊಂಡ್ರು -- 'ಅದೆಲ್ಲ ಆಗೋಮಾತಲ್ಲ ಸಾಯಂಕಾಲ ಆಶ್ರಮದ ಬ್ರಹ್ಮಚಾರಿಗಳಿಗೆ ಕಾಣದಹಾಗೆ ಸಿಟೀಗೆ ಹೋಗಿ ಏನಾದ್ರೂ ತಿನ್ನಕೊಂಡು ಬರದೇ ಇದ್ರೆ ಪ್ರೋಗ್ರಾಂ ಮುಗಿಯೋಹೊತ್ತಿಗೆ ನಮಗೇ ಯಾರಿಗಾದ್ರೂ ಖೇಲ್‌ಖತಂ ಅಂತ ಆಗಿರತ್ತೆ, ಅಷ್ಟೆ.'

ಹಾಗಂದುಕೊಂಡು ಸಾಯಂಕಾಲ ಬಟ್ಟೆಗಳನ್ನ ಹಾಕಿಕೊಂಡು ಹೊರಗೆ ಹೋಗೋಣ ಅಂತ ಬಂದ್ರೆ ಗೇಟ್ ಹತ್ರ ಸೀನಿಯರ್ ಬ್ರಹ್ಮಚಾರೀನೇ ನಿಂತಿರಬೇಕೆ !

"ಛ್ಛ್, ಛ್ಛ್ , ನೀವು ಹೀಗೆ ಮಾಡತೀರಿ ಅಂತ ನನಗೆ ಗೊತ್ತಿತ್ತು. ಕ್ಷಮಿಸಿ, ಪ್ರೋಗ್ರಾಂ ಪೂರ್ತಿ ಮುಗಿಯೋ ತನಕ ಯಾರೂ ಆಚೆಗೆ ಹೋಗೋಹಾಗಿಲ್ಲ. ದಯವಿಟ್ಟು ವಾಪಸ್ ಹೋಗಿ''

"ಸ್ವಾಮೀಜಿ, ನಿನ್ನೆಯಿಂದ ಒಳಗೇ ಇದ್ದೂ ಇದ್ದೂ ಬೇಜಾರಾಗತಾ ಇದೆ . ಕೊಂಚ ಆಚೆಕಡೆ ಗಾಳಿ ಕುಡಿಕೊಂಡು ಬರೋಣ ಅಂತ .. .. ..''

"ಬರೀ ಗಾಳೀನೇ ಕುಡಕೊಂಡು ಬರತೀರೋ ಇನ್ನೇನು ಮಾಡಿಕೊಂಡು ಬರತೀರೋ ಯಾರಿಗೆ ಗೊತ್ತು - ಆಚೆಕಡೆ ಎಷ್ಟೊಂದು ಪ್ರಲೋಭನೆಗಳು ಇರತ್ವೆ... ನಾವು ಇಲ್ಲಿ ಹೇಳಿಕೊಡೋದು ಒಂದು, ನೀವು ಅಲ್ಲಿಹೋಗಿ ಮಾಡಿಕೊಂಡು ಬರೋದು ಇನ್ನೊಂದು ಅನ್ನೋದು ಆಗಬಾರದಲ್ಲ ! ...''

ಥತ್, ಹಾಳಾದೋನೆ ಅಂತ ಒಳಗೇ ಬೈದುಕೊಂಡು ಒಬ್ಬೊಬ್ಬರಾಗಿ ಅಲ್ಲಿಂದ ಹೊರಟರು . ಉಳಕೊಂಡೋರು ಅಂದ್ರೆ 'ಮುನೀಶ್' ಮುನಿಶಾಮಯ್ಯ, ರಾಮನ್ ಅಯ್ಯರ್, ಪೂವಯ್ಯ ಮತ್ತೆ ನಾಗಪ್ಪ - ನಾಕು ಜನ.

"ಹ್ಹಂ, ನಾವಾಗಿ ನಾವು ಮಾಡಿಕೊಂಡಿರೋ ತಪ್ಪು ಈ ಪ್ರೋಗ್ರಾಂಗೆ ಸೇರಿಕೊಂಡದ್ದು .. ಯಾಕೆ ಅವರಿವರನ್ನ ಬಯ್ಯಕೋಬೇಕು - ಒಳಗೆ ಹೋಗಿ ಮತ್ತೆ ನಾಕು ಗೋಡೆ ಮಧ್ಯ ಕೊಳೀತಾ ಕೂತಿರೋ ಬದಲು ಇಲ್ಲೇ ಗಾರ್ಡನ್‌ನಲ್ಲಿ ಸುತ್ತಾಡಿಕೊಂಡಾದ್ರೂ ಬರೋಣ ಬನ್ನಿ'' - ಪೂವಯ್ಯ ಸಲಹೆ ಮಾಡಿದ.

ಬೇರೆ ದಾರೀನೇ ಇಲ್ಲವಲ್ಲ ಅಂದುಕೊಂಡು ಮಿಕ್ಕೋರೂ ಅವನ ಜೊತೇನಲ್ಲಿ ಹೊರಟರು.

ಗಾರ್ಡನ್ನೇನೋ ದೊಡ್ಡದಾಗಿತ್ತು, ಒಂದು ರೌಂಡ್ ಬರಬೇಕೂ ಅಂದ್ರೆ ಅರ್ಧಗಂಟೇನೇ ಬೇಕಾಗೋ ಥರ. ಬೆಳಗ್ಗೆಯಿಂದ ಹೊಟ್ಟೇಗೇನೂ ಸರಿಯಾಗಿ ಬಿದ್ದಿಲ್ಲದೇ ಹೋಗಿದ್ರೂ ಮಲ್ಲಿಗೆ ತೋಟದಿಂದ ಬರತಿದ್ದ ಘಂ ಅನ್ನೋ ವಾಸನೆ ಸ್ವಲ್ಪ ಹಾಯನಿಸೋ ಹಾಗಿತ್ತು .

ಇದ್ದಕ್ಕಿದ್ದ ಹಾಗೆ ಪೂವಯ್ಯ ಕೂಗಿಕೊಂಡ - ''ಸಾರ್, ಅಲ್ಲಿ ಕಾಂಪೋಂಡ್ ಕೂನೇನಲ್ಲಿ ಏನಿದೆ ನೋಡಿ.''

ನೋಡಿದ್ರೆ ಅಲ್ಲಿ ಒಂದು ಚಿಕ್ಕ ಗೇಟು, ಯಾವಾಗ ಹಾಕಿಸಿದ್ದೋ ಏನೋ ಎಲ್ಲ ತುಕ್ಕುಹಿಡಿದು ಕೂತಿದೆ. ಪ್ಯಾಡ್‌ಲಾಕ್ ಇದೆ ಆದ್ರೆ ಅದಕ್ಕೆ ಬೀಗ, ಬೀಗಿತ್ತಿ ಅನ್ನೋವು ಏನೂ ಇಲ್ಲ - ಸುಮ್ಮನೆ ಒಂದು ತಂತಿ ತಗಲುಹಾಕಿದೆ, ಎಳದ್ರೆ ಬರೋ ರೀತೀನಲ್ಲಿ.

ಸರಿ, ಗೇಟ್ ತೆಕ್ಕೊಂಡು ನಾಕು ಜನರೂ ಖುಷಿಯಾಗಿ ಆಚೆ ಬಂದು ರಸ್ತೇಲಿ ಬರತಿದ್ದ ಲೋಡ್‌ಗಾಡೀನ ನಿಲ್ಲಿಸಿ ಹತ್ತಿಕೊಂಡ್ರು, ಸಿಟೀಗೆ ಹೋಗೋದಕ್ಕೆ. ಆವಾಗ ನಾಗಪ್ಪ ಜ್ಞಾಪಿಸ್ಕೊಂಡು ಓಡಿಕೊಂಡು ಬಂದು ಗೇಟ್ ಮುಚ್ಚಿ ತಂತೀನ ಮುಂಚೆ ಹ್ಯಾಗಿತ್ತೋ ಹಾಗೆ ಕಟ್ಟಿ ಬಂದ - ನಾಳೆ ನೋಡಿದೋರು ಯಾರಿಗಾದ್ರೂ ಅನುಮಾನ ಬರಬಾರದಲ್ಲ!

ವೀರಸಂದ್ರದ ಹತ್ತಿರ ಇಳಕೊಂಡು ರಸ್ತೆಮಗ್ಗುಲಿಗೇ ಇದ್ದ ''ನ್ಯೂ ಹನುಮಾನ್ ಪಂಜಾಬೀ ಧಾಬಾ'' ಅನ್ನೋದಕ್ಕೆ ನುಗ್ಗಿದ್ರು. ರಾಮನ್ ಅಯ್ಯರ್‌ಗೆ ಒಂದು ನಿಮಿಷ ಮುಜುಗರ ಆಯಿತು - ಅಲ್ಲ, ಹೊರಗಡೆ ಬೋರ್ಡ್‌ನಲ್ಲಿ ''ವೆಜ್, ನಾನ್ ವೆಜ್, ಚೈನೀಸ್, ಮೊಗಲಾಯಿ, ಕಾಂಟಿನೆಂಟಲ್.'' ಅಂತ ಏನೇನೋ ಬರದಿದ್ದಾರೆ - ಮಾಂಸಮಡ್ಡಿ ಮಾಡೋ ಸೌಟಲ್ಲೇ ಮಸಾಲದೋಸೇನೂ ಹುಯ್ಯೋದು ಮಾಡಿರತಾನಲ್ಲ !

ಆಮೇಲೆ ಅವನೇ ಸಮಾಧಾನ ಹೇಳಿಕೊಂಡ - ಅಂಥಾ ವಿಶ್ವಾಮಿತ್ರನೇ ಹಸಿವು ತಡೀಲಾರದೆ ಕಂತ್ರೀ ನಾಯೀನ್ನ ಕೊಂದು ತಿಂದನಂತೆ. ಅಂಥಾದ್ರಲ್ಲಿ ಸಂದೇಸು ಮಹಾ? ಅಷ್ಟಕ್ಕೂ ಇಡ್ಲಿ ದೋಸೆ ಬಿಟ್ರೆ ಇಲ್ಲಿ ನಾನು ಬೇರೆ ಇನ್ನೇನೂ ಆರ್ಡರ್ ಮಾಡತಿಲ್ಲವಲ್ಲ !

ಆಚೆಕಡೆಯಿಂದ ಧಾಭಾ ಹ್ಯಾಗೆ ಹಾಗೋ ಕಾಣಿಸ್ತಾ ಇದ್ರೂ ಅಡಿಗೆ ಮಾತ್ರ ಚನ್ನಾಗೇ ಇತ್ತು. ಮುನೀಶ್, ಪೂವಯ್ಯ ಮತ್ತೆ ನಾಗಪ್ಪ ಚಿಕ್ಕನ್ನು, ಮಟನ್ನು ಅಂತ ಏನೇನೋ ತರಿಸ್ಕೊಂಡು ತಿನ್ನತಿದ್ರು. ಅಯ್ಯರ್ ಮಾತ್ರ ಮಸಾಲದೋಸೆ ತಿಂದದ್ದು ರುಚಿ ಹತ್ತಿಬಿಟ್ಟು ಎರಡನೇದಕ್ಕೆ ಆರ್ಡರ್ ಮಾಡಿ ಕೂತಿದ್ದ.

ಪಾಪ, ಮಡಿಬ್ರಾಹ್ಮಣ ಅಯ್ಯರನ್ನ ಹೋಗಿಹೋಗಿ ನಾನ್‌ವೆಜ್ ಹೋಟೆಲ್‌ಗೆ ಕರಕೊಂಡುಬಂದು ಅನಾಚಾರ ಮಾಡಿಸ್ತಾ ಇದೀವಿ, ಅದಕ್ಕೆ ಅವನಿಗೇನಾದ್ರೂ ಬೇಜಾರು ಆಗತಾ ಇರಬಹುದೇನೋ ಅಂದುಕೊಂಡು ಮುನೀಶ್ ಅವನನ್ನ ಕೇಳಿದ: ''ಹೋಗಿಹೋಗಿ ನಿಮ್ಮನ್ನ ಈ ಹೋಟಲಿಗೆ ಕರಕೊಂಡು ಬಂದಿದ್ದೀವಿ ಅಂತ ನಮ್ಮಮೇಲೆ ಬೇಜಾರಾ ಅಯ್ಯರ್?''

''ಛೆ, ಅಂಥಾದ್ದೇನೂ ಇಲ್ಲ. ಆದ್ರೆ ಒಂದು ವಿಷಯ ಯಾಕೋ ಸರಿಯಿಲ್ಲ ಅನ್ನಿಸತ್ತೆ...''

''ಯಾವ ವಿಷಯ?...''

''ಉಳಿದೋರು ಪಾಪ, ಅಲ್ಲಿ ಆಶ್ರಮದಲ್ಲಿ ಊಟ ಬಾಯಿಗಿಡೋಕ್ಕೆ ಆಗೊಲ್ಲ ಅಂತ ಒದ್ದಾಡತಾ ಇದ್ದಾಗ ನಾವು ನಾಕು ಜನ ಮಾತ್ರ ಇಲ್ಲಿ ಮಜಾ ಮಾಡಿಕೊಂಡು ಕೂತಿರೋದು ನನಗೆ ಯಾಕೋ ಸರಿ ಅನ್ನಿಸೋಲ್ಲ. ಈ ಗೇಟ್ ಇರೋ ವಿಷಯಾನ ಅವರಿಗೂ ಹೇಳಿದ್ರೆ ಹ್ಯಾಗೆ...?''

ಅವನು ಇನ್ನೂ ಮಾತು ಮುಗಿಸೇ ಇಲ್ಲ, ಅಷ್ಟರಲ್ಲೇ ಪೂವಯ್ಯ ಅವನಿಗೆ ತಗಲಿಕೊಂಡ--

"For God's sake - ಹಾಗೇನಾದ್ರೂ ಮಾಡಿಗೀಡೀರ... ಆಮೇಲೆ ನಾಳೇನೇ ಆಶ್ರಮದೋರು ಅದಕ್ಕೊಂದು ಬೀಗ ಜಡಿದಿರತಾರೆ, ಮಿಕ್ಕೋರ ಹಾಗೇ ನಾವೂನೂ ಹುಲ್ಲು ತಿಂದುಕೊಂಡು ಆಶ್ರಮದಲ್ಲಿ ಬಿದ್ದುಕೊಂಡಿರಬೇಕಾಗತ್ತೆ. no, nothing of that sort.."

ತಿಂದದ್ದೆಲ್ಲ ಆದಮೇಲೆ ಅವರುಗಳು ಬೆಳಿಗ್ಗೇಗೂ ಒಂದು ಇಷ್ಟು ಇರಲಿ ಅಂತ ಏನೇನೋ ಪಾರ್ಸಲ್ ಕಟ್ಟಿಸ್ಕೊಂಡು ಆಚೆ ಬಂದು ಅಲ್ಲೇ ಹೋಗತಿದ್ದ ಮರಳಿನ ಲಾರೀನ ಹತ್ತಿಕೊಂಡು ಮತ್ತೆ ಅದೇ ಗೇಟಿನ ಮುಖಾಂತರಾನೇ ಒಳಗೆ ಬಂದು ಸೇರಿಕೊಂಡರು. ಅವರು ಹೀಗೆ ಆಚೆಗೆ ಹೋಗಿದ್ರು ಅನ್ನೋದು ಯಾರಿಗೂ ಗೊತ್ತಾಗಿದ್ದಹಾಗೆ ಕಾಣಲಿಲ್ಲ.

ಮೂರುನಾಕು ದಿನ ಅವರು ಇದೇ ರೀತಿ ಆಚೆಕಡೆ ಹೋಗೋದು ಮತ್ತೆ ಅದೇ ಧಾಭಾದಲ್ಲಿ ತಿಂದುಕೊಂಡು ಬರೋದು ಮಾಡತಿದ್ರು. ದಿನವೂ ಒಂದೇ ಕಡೆ ಹೋಗಿ ಒಂದೇ ಥರ ತಿಂಡಿ ತಿನ್ನೋದು ಬೇಜಾರು ಅಂತ ಅನ್ನಿಸ್ತಾ ಇದ್ರೂ ಇನ್ನೂ ನಾಕೈದು ದಿನ ಏನೂ ಬದಲಾವಣೆ ಮಾಡೋದು ಬೇಡ, ಕದ್ದು ಆಚೆ ಹೋಗತಾ ಇರೋದು ಯಾರಿಗೂ ಗೊತ್ತಾಗುತ್ತಿಲ್ಲ ಅನ್ನೋದು ಖಾತ್ರಿಯಾದಮೇಲೆ ಬೇರೆಕಡೆ ಹೋಗೋ ಪ್ರಯತ್ನ ಮಾಡಿದರಾಯಿತು ಅನ್ನೋದು ಅವರು ನಾಕುಜನದ್ದೂ ಅಭಿಪ್ರಾಯ ಆಗಿತ್ತು.

ಆದರೆ ಆಚೆಕಡೆ ಹೋಗಿ ತಿಂದುಬರೋಕ್ಕೆ ಒಂದು ದಾರಿ ಇದೆ ಅನ್ನೋ ವಿಷಯಾನ್ನ ಮಿಕ್ಕೋರಿಗೂ ತಿಳಿಸಿದ್ದಿದ್ರೆ ಚೆನ್ನಾಗಿ ಇರತಿತ್ತು ಅಂತ ಅಯ್ಯರ್ ರಾಗ ತೆಗೆಯೋದು, ಅದರ ಬಗ್ಗೆ ಪೂವಯ್ಯ ಅವನಿಗೆ ಝಾಡಿಸೋದು, ಇದು ನಿತ್ಯಾನೂ ನಡೀತಾನೇ ಇತ್ತು.

ಒಂದುವಾರ ಆಯಿತು, ಏನೂ ತೊಂದರೆ ಬಂದಿಲ್ಲ ಅಂತ ಖಾತರಿ ಆದಾಗ ಅಯ್ಯರ್ ಒಂದು ಹೊಸ ಐಡಿಯಾ ಮುಂದಿಟ್ಟ: "ಒಂದು ನಾಕೈದು ಕಿಲೋಮೀಟರ್ ಮುಂದೆ ಹೋದ್ರೆ ಜೆ.ಪಿ. ನಗರದ ಹತ್ರ ಒಂದು ಉಡುಪಿ ಹೋಟಲಿದೆ. ಅಲ್ಲೀನದ್ದು ಖಾಲಿದೋಸೆ, ಚಟ್ನಿ ತುಂಬಾ ಫೇಮಸ್ಸು, ತಿನ್ನೋಕ್ಕೆ ಅಂತ ಊರಿನ ಜನವೆಲ್ಲಾ ಬರತಾರೆ. ಇವತ್ತು ಅಲ್ಲಿಗೆ ಹೋಗಿ ಬರೋಣ, ಏನಂತೀರಿ?"

ಅವರು ಏನಂತಾರೆ? ಇಷ್ಟು ದಿನಾನೂ ಅವರುಗಳು ಕರಕೊಂಡು ಹೋದ ಕಡೆಗೆ ಇವನು ಬರತಿರಲಿಲ್ಲವಾ? ಆಯಿತು, ನೀವು ಹೇಳೋ ಹಾಗೇ ಮಾಡೋಣ ಅಂತ ಒಪ್ಪಿಕೊಂಡರು.

ಆದರೆ ಸಂಜೆ ಅವರು ಗೇಟ್ ಹತ್ರ ಬಂದು ನೋಡಿದ್ರೆ - ಪ್ಯಾಡ್‌ಲಾಕಿಗೆ ದಿನವೂ ಇರತಿದ್ದ ತಂತಿ ಬದಲು ಹೊಸಾ ಬೀಗ, ಗಾಡ್ರೇಜ್ ಏಳು ಲೀವರಿನದ್ದು, ಜಡಿದಿದ್ದಾರೆ !

ಛೆ, ಎಂಥಾ ಕೆಲಸ ಆಗಿಹೋಗಿದೆ, ಇನ್ನು ಪ್ರೋಗ್ರಾಂ ಮುಗಿಯೋ ತನಕ ಚಿಕ್ಕನ್ ಫ್ರೈ, ಖಾಲಿದೋಸೆ ಅನ್ನೋವಕ್ಕೆಲ್ಲಾ ಎಳ್ಳುನೀರು ಬಿಡಬೇಕಲ್ಲ ಅಂತ ಎಲ್ಲರೂ

ಪೇಚಾಡಿಕೊಂಡರು. ಪೂವಯ್ಯ ಅಂತೂ going ballistic ಅಂತಾರಲ್ಲ, ಹಾಗೆ ಕಿರಚೋಕ್ಕೆ ಶುರೂಮಾಡಿದ -

''ನಮ್ಮಲ್ಲೇ ಯಾರೋ ಕಂತ್ರಿ ನನ್ನಗ ಮೀರ್ ಸಾದಕ್ ಕೆಲಸ ಮಾಡಿರಬೇಕು, ಇಲ್ಲದಿದ್ರೆ ಇಷ್ಟುದಿನ ಇಲ್ಲದ್ದು ಬೀಗ ಇವತ್ತು ಹ್ಯಾಗೆ ಬಂದಿರೋಕ್ಕೆ ಸಾಧ್ಯ?...''

ಅಯ್ಯರ್ ಅದನ್ನ ಕೇಳಿದೋನು ಪೂವಯ್ಯ ತನ್ನಮೇಲೆ ಅನುಮಾನ ಪಡತಾ ಇದಾನೆ ಅಂತ ಅಂದುಕೊಂಡು ಹೇಳಿದ'... "Mother promise, ನಾನಂತೂ ಯಾರಮುಂದೇನೂ ಇದರ ವಿಷಯ ಬಾಯಿಬಿಟ್ಟಿಲ್ಲ... ನನ್ನಮೇಲೆ ತಪ್ಪು ಹೊರಿಸಬೇಡಿ...''

''ನಿನ್ನನ್ನ ಯಾರು ಬೈದರೋ, ಗೂಬೆ? ಕುಂಬಳಕಾಯಿ ಕಳ್ಳ ಅಂದ್ರೆ ನೀನು ಯಾಕೋ ಹೆಗಲು ಮುಟ್ಟಿಕೋತಾ ಇದ್ದೀಯ?...''

ಏಕವಚನದಲ್ಲಿ ಗೂಬೆ, ಕುಂಬಳಕಾಯಿ ಕಳ್ಳ ಅಂತ ಬಯ್ಯಿಸ್ಕೊಂಡೋನು ಅಯ್ಯರ್ ಅವನೂ ಕೂಡ ಸುಮ್ಮನೇ ಇರತಾನೆಯೇ?... ಶುರೂ ಮಾಡಿಕೊಂಡ ಅವನೂನೂ, ಒಳ್ಳೇ ಸಂಸ್ಕೃತದಲ್ಲೇ.

ಅವರುಗಳು ಹೀಗೇ ಜಗಳ ಆಡತಾ ನಿಂತಿದ್ರೆ ವಿಷಯ ಆಶ್ರಮದೋರಿಗೆ ಗೊತ್ತಾಗಿ ಮಾಮಲೆ ಗಬ್ಬೆದ್ದು ಹೋಗೋದು ಗ್ಯಾರಂಟಿ, ಬೇರೆ ಟೈಂ ಆಗಿದ್ದಿದ್ರೆ ಇಬ್ಬರಿಗೂ ನಾಕುನಾಕು ತದಕಿ ಸರಿಮಾಡತಿದ್ದೆ, ಆದ್ರೆ ಇಲ್ಲಿ ಹಾಗ ಮಾಡೋಕ್ಕೆ ಆಗೊಲ್ಲವಲ್ಲ ಅಂದುಕೊಂಡು ಮುನೀಶ್ ನಾಗಪ್ಪನಿಗೆ ಹೇಳಿದ -

''ಯಾಕೋ ಇದು ವಿಪರೀತಕ್ಕೆ ಹೋಗತಾ ಇದೆ, ನಾಗಪ್ಪನೋರೇ. ಹಾಗೇ ಬಿಟ್ರೆ ಪೂವಯ್ಯ ಈ ಪುಳಿಚಾರ್ ಅಯ್ಯರನ್ನ ಚಟ್ನಿ ಅರೆದ್ರೂ ಅರೆಯೋನೇ. ಅದಕ್ಕೆ ಮುಂಚೆ ಏನಾದ್ರೂ ಮಾಡಬೇಕಲ್ಲ,"

''ಈ ಗೇಟ್‌ಗೆ ಈಥರ ಒಂದು ಬೀಗ ಹಾಕಬೇಕು ಅನ್ನೋದು ಬಹಳ ದಿನದಿಂದ ಐಡಿಯಾ ಇದ್ದಿರಬೇಕು, ಅದು ಇವತ್ತು ಹಾಕಿದ್ದಾರೆ ಅಷ್ಟೆ. ಅದಕ್ಕೆ ಯಾಕೆ ಇಷ್ಟೊಂದು ಜಗಳ? ಈಗ ಏನಾಗಬೇಕು - ಬೀಗ ತೆಗೆಯೋಕ್ಕೆ ಆಗಬೇಕು, ಮಾಮೂಲಿನ ಹಾಗೆ ಆಚೆಕಡೆಗೆ ಹೋಗಿಬರೋದು ಆಗಬೇಕು, ಅಷ್ಟೇ ತಾನೆ?... ಎರಡು ನಿಮಿಷ ಜಗಳ ಆಡದೀರ ಸುಮ್ಮನೆ ಇರಿ, ನೋಡೋವರಂತೆ ಈ ನಾಗಪ್ಪ ಏನು ಮಾಡತಾನೆ ಅನ್ನೋದನ್ನ...''

ಅಂದೋನೇ ನಾಗಪ್ಪ ಜೇಬಿಂದ ಬೀಗದಕ್ಕೆ ಗೊಂಚಲು ತೆಗೆದು ಒಂದು ಹಾಕಿನೋಡಿದ. ಬೀಗ ಬರಲಿಲ್ಲ, ಎರಡನೇದು? ಅದೂ ಅಷ್ಟೆ, ಏನೂ ಉಪಯೋಗವಿಲ್ಲ. ಅದೇ ಮೂರನೇದು? ಸಿಕ್ಕಿಸಿ ಒಂದೆರಡು ಸಲ ಹೀಗೇ ಹಾಗೆ ಅನ್ನೋಕ್ಕಿಲ್ಲ ಕಳಕ್ ಅಂತ ತೆಕ್ಕೋತು.

ಮೀರ್ ಸಾದಕ್, ಗೂಬೆ... ಅಂತ ಪೂವಯ್ಯನ ಕೈನಲ್ಲಿ ಏನೇನೋ ಅನ್ನಿಸಿಕೊಂಡಿದ್ದ ಅಯ್ಯರ್ ಸಂತೋಷ ತಡೀಲಾರದೆ ಒಂದೇ ಹಾರಿಗೆ ಹೋಗಿ ನಾಗಪ್ಪನ್ನ ಅಪ್ಪಿಕೊಂಡ - - ನೀನೇ ಇಂದ್ರ, ಚಂದ್ರ, ಮಹೇಂದ್ರ ಅಂತ ಅವನನ್ನ ಹೊಗಳೋಕ್ಕೆ ಶುರೂ ಮಾಡಿದ.

''ಐ, ಬಿಡು ಐಯರ್ ಚಾಮಿ... ಈ ಗಾಡ್ರೇಜ್ ಬೀಗ ಯಾವ ಮಹಾ ಲೆಕ್ಕ ಅಂತ ಹೇಳತೀರಿ ಈ ನಾಗಪ್ಪನಿಗೆ ? Yale, Burg...ಅಂತನ್ನೋವು ಎಷ್ಟೊಂದು ಫಾರೀನ್ ಬೀಗಗಳಿಗೆ ನಾನು ಡೂಪ್ಲಿಕೇಟ್ ಎಸಳು ಮಾಡಿಕೊಟ್ಟಿಲ್ಲ ! ತಮಿಳುನಾಡಿಗೆ ಹೋಗಿ ಕೇಳಿ...''

ಅಂತ ಹೇಳೋಕ್ಕೆ ಹೊರಟಿದ್ದೋನು ಯಾಕೋ ಏನೋ ಇದ್ದಕ್ಕಿದ್ದ ಹಾಗೆ ಮಾತು ಬದಲಾಯಿಸಿದ -

''ಪ್ಚ್, ಅದೆಲ್ಲಾ ಆಮೇಲೆ ನಿಧಾನವಾಗಿ ಮಾತಾಡೋಣ... ಮೊದಲು ಕರಕೊಂಡು ಹೋಗಿ ಆ ಉಡುಪಿ ಹೋಟಲಲ್ಲಿ ದೋಸೆ ಕೊಡಿಸಿ... ಖರ್ಚೆಲ್ಲಾ ನಿಮ್ಮದೇ ಇವತ್ತು''

ಡೂಪ್ಲಿಕೇಟ್ ಬೀಗದಕ್ಕೆ ಹಾಕಿ ಬೀಗ ತೆಗೀತಿರೋವಾಗಲೆ ಮುನಿಶಾಮಯ್ಯನಿಗೆ ಅನುಮಾನ ಬಂದಿತ್ತು , ಈ ನಾಗಪ್ಪನೇ ಆ ಬೀರಪ್ಪನ್ ಇರಬೇಕು ಅನ್ನೋದು . ಯಾವಾಗ ಅವನು "ಎಷ್ಟೊಂದು ಡೂಪ್ಲಿಕೇಟ್ ಎಸಳು", "ತಮಿಳುನಾಡಿಗೆ ಹೋಗಿ"... ಅಂತ ಹೇಳಿದನೋ ಅದು hundred percent confirmed ಆದಹಾಗಾಯಿತು.

ಈಗ next step ಏನು?... ಸಾಹೇಬರಿಗೆ ಫೋನ್ ಮಾಡಿ ವಿಷಯ ತಿಳಿಸಿದ್ರೆ ಅವರು ಬೀರಪ್ಪನ್‌ನ ಎಳಸಿಕೊಂಡು ಹೋಗತಾರೆ. ಎಷ್ಟೋ ವರ್ಷ ಪೋಲೀಸಿನೋರಿಗೆ ನೀರು ಕುಡಿಸತಾ ಇದ್ದೋನನ್ನ ಪತ್ತೆ ಮಾಡಿದ ಅಂತ ಶಹಭಾಷ್‌ಗಿರಿ, ಮುಂದಕ್ಕೆ ಪ್ರಮೋಷನ್ನು, ಪೋಲೀಸ್ ಮೆಡಲ್ಲು, ಇನ್ನೂ ಏನೇನೋ.

ಆದ್ರೆ ಎಲ್ಲಕ್ಕಿಂತ ಮುಖ್ಯವಾಗಿ ಈ ಆಶ್ರಮದಲ್ಲಿ ಸೊಪ್ಪು ತಿಂದುಕೊಂಡು ಸಾಯೋದು ತಪ್ಪುತ್ತೆ .

ಆಶ್ರಮದಿಂದ ಬೇಡ, ದೋಸೆಗೆ ಆರ್ಡರ್ ಮಾಡೋಕ್ಕೆ ಮುಂಚೆ ಹೋಟಲ್ ಹತ್ತಿರಾನೇ ಯಾವುದಾದರೂ ಟೆಲಿಫೋನ್ ಬೂಥಿಂದ ಫೋನ್ ಮಾಡಿ ಸಾಹೇಬರಿಗೆ ವಿಷಯ ತಿಳಿಸಲೇ ಅಂದುಕೊಂಡೋನು ಆಮೇಲೆ ಅಂದುಕೊಂಡ - ಅಂಥಾ ಅವಸರ ಯಾಕೆ, ಹಕ್ಕಿ ನನ್ನ ಕೈನಲ್ಲೇ ಇರೋವಾಗ ? ರಾತ್ರಿ ಎಲ್ಲಾರೂ ಮಲಗಿರೋವಾಗ ಹೇಳಿದ್ರೆ ಆಯಿತು, ಸದ್ದಿಲ್ಲದೇ ಕೆಲಸ ನಡೆದುಹೋಗತ್ತೆ. ಹೋಟೆಲ್ ಹತ್ರ ಅಂದ್ರೆ ಹೋಗೋರು ಬರೋರು ಅಂತ ದೊಂಬೀನೇ ಮುತ್ತಿಕ್ಕೋ ಬಹುದಲ್ಲ !

ಸರಿ, ಹೋಟಲಿಗೆ ಬಂದು ಮೊದಲಿಗೆ ಎಲ್ಲರೂ ಒಂದೊಂದು ಪ್ಲೇಟ್ ದೋಸೆ ಆರ್ಡರ್ ಮಾಡಿ ತಿಂದು ಮುಗಿಸಿದರು.

ಖಾಲಿದೋಸೆ ಅನ್ನೋದನ್ನ ಮುನಿಶಾಮಯ್ಯಾನೂ ಬೇರೆ ಬೇಕಾದಷ್ಟು ಕಡೆ ತಿಂದವನೇ... ಆದ್ರೆ ಇಲ್ಲಿನ ರುಚಿ? especially ಚಟ್ನಿ ರುಚಿ?... ಹಾಗಾಗಿ ಅವನೇ ಇನ್ನೂ ನಾಕು ಪ್ಲೇಟ್ ತರಿಸ್ದ.

ಆ ದೋಸೇನೋ? ಒಳ್ಳೆ blotting paper ಹಾಗೆ ಎಷ್ಟು ಚಟ್ನಿ ಇದ್ರೂ ಹೀರಿಕೊಳ್ಳತ್ತೆ . ಹಾಗಾಗಿ ಮುನಿಶಾಮಯ್ಯ ಇನ್ನೊಂದು ಸಲ ಚಟ್ನಿ ಕೇಳಿ ಹಾಕಿಸಿಕೊಂಡ. ಇನ್ನೊಂದು ಅರ್ಧದೋಸೆ ಇದೆ ಅನ್ನೋವಾಗ ಮತ್ತೆ ಚಟ್ನಿ ಮುಗಿದುಹೋಯಿತು.

"ಲೇ ಮರಿ, ಇನ್ನು ಕೊಂಚ ಚಟ್ನಿ ಕೊಡೋ..."

"ಇಲ್ಲ, ಕೊಡೋಲ್ಲ..."

"ಯಾಕೆ ಕೊಡೋಲ್ಲ ?..." - ಮುನಿಶಾಮಯ್ಯ ಕೊಂಚ ಕೋಪವಾಗೇ ಕೇಳಿದ.

"ಯಾಕೇ ಅಂದ್ರೆ... ಒಂದೇ ಪ್ಲೇಟ್ ದೋಸೆಗೆ ಮೂರುಸಲ ಚಟ್ನಿ ಕೊಡೋದಿಲ್ಲ. ಬೋರ್ಡ್ ಮೇಲೆ ಬರದಿರೋದು ಕಾಣೋಲ್ಲವಾ?"

"ಬೋರ್ಡ್‌ನಲ್ಲಿ ಸಾವಿರ ಬರದಿರತ್ತೆ - ಬಾಯಿ ಮುಚ್ಚಿಕೊಂಡು ಚಟ್ನಿ ಕೊಡೋ, ಬೇವಾರ್ಸಿ ನನ್ಮಗನೇ..."

ಮಾಣೀಗೂ ರೇಗಿಯೋಯಿತು. ಹೋದ, ಒಂದು ಹಿಡೀಪಾತ್ರೆ ತುಂಬಾ ಚಟ್ನಿ ತಂದೋನೇ ತಟ್ಟೆ ತುಂಬಾ ಸುರಿದ.

"ಇನ್ನೂ ಅರ್ಧಪಾತ್ರೆ ಮಿಕ್ಕಿದೆ. ಅದನ್ನ ಎಲ್ಲಿ ಹುಯ್ಯಲಿ?."

ಮುನಿಶಾಮಯ್ಯನಿಗೆ ಪಿತ್ತ ನೆತ್ತೀಗೆ ಏರಿಯೋಯಿತು-

"ಎಲ್ಲಿ ಹುಯ್ಯಲಿ ಅಂತ ಏನು ಕೇಳತಿ? ಹುಯ್ಯಿ ನನ್ನ ತಲೇಮೇಲೇನೇ..."

"ತಮ್ಮ ಅಪ್ಪಣೆ, ಮಹಾಪ್ರಭೂ" ಅಂದೋನೇ ಅಷ್ಟು ಚಟ್ನೀನ್ನೂ ಅವನ ತಲೇಮೇಲೆ ಸುರಿದುಬಿಟ್ಟ.

ಆವಾಗ ನೋಡಿ, ಮುನಿಶಾಮಯ್ಯನಮೇಲೆ ನರಸಿಂಹದೇವರ ಆವಾಹನೆ ಆಗಿಹೋಯಿತು.

ಛಂಗ್ ಅಂತ ಹಾರಿದೋನೇ ಒಂದು ಕೊಟ್ಟ ಮಾಣಿ ಕಪಾಳಕ್ಕೆ. ಹಲ್ಲು ಬಿದ್ದುಹೋಗಿರಬೇಕು ಅಂತ ಕಾಣತ್ತೆ ಬಾಯಲ್ಲಿ ರಕ್ತ ಸುರಿಸ್ಕೊಂಡು ಅವನು ಕೆಳಗೆ ಬಿದ್ರೆ ಮುನಿಶಾಮಯ್ಯ ಅಲ್ಲಿಗೂ ಬಿಡಲಿಲ್ಲ.

"ಸಬ್ ಇನ್ಸ್‌ಪೆಕ್ಟರ್ ಮುನಿಶಾಮಯ್ಯ ಅಂದ್ರೆ ಪಾವಗಡ ಪಾವಗಡಾನೇ ನಡಗತ್ತೆ... ಅಂಥಾದ್ರಲ್ಲಿ ಈ ದರವೇಶಿ ಚಟ್ನಿಹುಯ್ಯೋನಿಗೆ ಇಷ್ಟು ತಿಮಿರು ಬಂದಿದ್ಯೇ..." ಅಂತ ಇನ್ನೂ ಏನೇನೋ ಪೋಲೀಸ್ ಭಾಷೇನಲ್ಲಿ ಬಯ್ಯೋದು, ಬಯ್ಯುತಾ ಬಯ್ಯುತಾ ತದಕೋದು ಮಾಡೋಕ್ಕೆ ಶುರೂ ಮಾಡಿದ.

ನಾಕು ಜನ ಧಾಂಡಿಗರೇ ಬೇಕಾಯಿತು ಅವನನ್ನ ಬಿಡಿಸೋಕ್ಕೆ. ಕರಕೊಂಡು ಬಂದು ಕುರ್ಚೀಲಿ ಕೂಡಿಸಿ ತಲೇಗೆ ಮುಖಕ್ಕೆ ನೀರುತಟ್ಟಿ ಬಟ್ಟೆ ತೊಗೊಂಡು ಒರಸತಿರಬೇಕಾದ್ರೂ ಅವನ ಬಾಯಿ ಸುಮ್ಮನೆ ಇರಲಿಲ್ಲ... ಆ ಊರಿನಲ್ಲಿ ಅಂಥಾ ಖದೀಮನ್ನ ಸ್ಟೇಷನ್ನಿಗೆ ಕರಕೊಂಡುಬಂದು ಹ್ಯಾಗೆ ಬೆಂಡ್ ಎತ್ತಿದೆ, ಈ ಊರಲ್ಲಿ ಇಂಥಾವರ ಮನೇಗೆ ಕನ್ನಹಾಕಿದೋರನ್ನ ಹಿಡಿದು ಹ್ಯಾಗೆ ತದಕಿದೆ. ಈ ನನ್ನಮಗ ಚಟ್ನಿ ಬಡಿಸೋವಂದು ತಿಮಿರು ನೋಡಿ. ಅಂತ ಏನೇನೋ ಕಿರಚಕೋತಿದ್ದ.

ಒಂದು ಹತ್ತುನಿಮಿಷಾನೇ ಬೇಕಾಯಿತು, ಅವನು room temperature ಗೆ ಬರಬೇಕಾದರೆ. ಆವಾಗ ಅವನಿಗೆ ಜ್ಞಾಪಕಕ್ಕೆ ಬಂತು - ಆಶ್ರಮದಿಂದ ಕಳ್ಳದಾರೀಲಿ ಹೊರಗೆ ಬಂದಿದ್ದೀನಿ, ಜೊತೇನಲ್ಲಿ ಇನ್ನೂ ಮೂವರು ಇದ್ದರು ಅನ್ನೋದು. - ಅವರೆಲ್ಲ ಎಲ್ಲಿ ಈಗ?


ಪೂವಯ್ಯ?.. ಅಲ್ಲೇ ಮಾತಾಡತಾ ನಿಂತಿದ್ದಾನೆ. ಅಯ್ಯರ್?... ನಡೆದದ್ದು ನೋಡಿ ಗಾಬರಿಯಾಗಿರಬೇಕು, ಬೆಪ್ಪಾಗಿ ಕೂತಿದ್ದಾನೆ. ಮತ್ತೆ ನಾಗಪ್ಪ?... ಕಾಣಿಸತಾ ಇಲ್ಲ !

ಅಯ್ಯೋ ದೇವರೆ, ಅಂದುಕೊಂಡು ಗಾಬರಿಗಾಬರಿಯಾಗಿ dining hall ನಲ್ಲಿ ಇರೋ ಟೇಬಲ್ಲುಗಳ ಹತ್ರ ನೋಡಿದ, ಇಲ್ಲ. ಮತ್ತೆ toilet ನಲ್ಲಿ? ಉಹುಂ. ಪಕ್ಕದಲ್ಲಿರೋ sweet stall ನಲ್ಲೂ ಇಲ್ಲ !

ಇವನ ಗಾಬರಿ ಮುಖ ನೋಡಿ ಗಲ್ಲಾ ಮೇಲೆ ಕೂತಿದ್ದ ಸಾಹುಕಾರ ಕೇಳಿದ - "ಈಪಾಟಿ ಗಾಬರೀನಲ್ಲಿ ಯಾರನ್ನ ಹುಡುಕತಾ ಇದೀರಿ, ಸಾರ್? ನಿಮ್ಮ ಜತೇನಲ್ಲಿ ಬಂದಿದ್ರಲ್ಲ ಮೂರನೇಯವರು, ಅವರನ್ನಾ?..."

"ಹೌದಪ್ಪಾ, ಎಲ್ಲಿ ಹೋದ್ರು?..."

"ಓ, ಅವರಾ? ನೀವು ನಮ್ಮ ಹುಡುಗನಿಗೆ ತಟ್ತಾ ಇರೋದು ನೋಡಿ ಹೆದರಿಕೆ ಆಗಿರಬೇಕು... ಅವಸರ ಅವಸರವಾಗಿ ರಿಕ್ಷಾ ಹತ್ಕೊಂಡು ಎಲ್ಲಿಗೋ ಹೊರಟೋದ್ರು..."



ಉಕ್ತಿ - ಚಾಟೂಕ್ತಿ

- ಎನ್. ರಾಮನಾಥ್

'ಷೇರುಪೇಟೆ ದಿಢೀರನೆ ಪಾತಾಳದತ್ತ' - ಸುದ್ದಿ

ಸೆನ್ಸೆಕ್ಸೆಂಬ ಜಾರಿನ ಬಂಡಿ ನಿಧಿಯದರ ಸಾಹೇಬ ಚದುರ ನೀನ್ ಸೂಚ್ಯಂಕ ಪಥದಿ ಪಯಣಿಗನು
creditಇರಗೋ debitಇರಗೋ balanceಇನಡೆ ನೋಡು ಬಲು ಕುಸಿಯೆ ಬದುಕಿರದು

★★★

'ಖಾಸಗಿ ಲಾಬಿಗೆ ಸರಕಾರ ಮಣಿಯದು' - ಸಾರಿಗೆ ಸಚಿವ

ಸರಕಾರ ನಿಲುವಿನೊಳು ಬಲು ಖಾರ ಮಣಿಯದದು
ಸಡಿಲಾಗಿ ಜಾರುವುದು ನಿಲುವಿರದೆ money ಎದುರು

★★★

'ಕುಮಾರ ಸರಕಾರ ಅಭಿವೃದ್ಧಿ ಪರವಲ್ಲ' - ಖರ್ಗೆ

ಎನಿತೋ ಯೋಜನೆಗಳೆನಿತೋ ಭರವಸೆಗಳೆನಿತೋ ಆಶಯಗಳಗರ ಕುಮಾರ
ಸಲ್ಲದಾವುದು ಹುರುಳೆನಿತು ಇಲ್ಲದ್ದು ಆಶ್ವಾಸನಯ ದುರ್ವಾಸನೆಯೋ ಎಮ್ಮ ಗ್ರಹಚಾರ

★★★

'ಮೀಸಲು ಅನಿವಾರ್ಯ' - ಸಿದ್ಧರಾಮಯ್ಯ

ರಾಜಕಾರಣದ ಬೇಳೆ ಬೇಯಲು ಮೀಸಲು ಎಂದೂ ಅನಿವಾರ್ಯ
ಅರ್ಹತೆ ತೊಡೆಯುತ ಜಾತಿಯ ಬೆಳೆಸೆ ನೆರವೇರದಾವುದು ಸತ್ಕಾರ್ಯ

★★★

'ನಗರದಲ್ಲಿ ಮತ್ತೆ ಕಂಡುಬಂದ ಕರುಳುಬೇನೆ' - ಸುದ್ದಿ

ಎಸ್ಸೆಸ್ಸೆಲ್ಲಿ ಪೀಯೂಸಿಗಳ ಫಲಿತವು ಹೊರಬಿದ್ದಿಹ ಕಾಲ
feesಉ donationನ ಚಿಂತೆಯು ಕಾಡಿದೆ ಹೆತ್ತ ಕರುಳಿಗಿದು ಹರಿತದ ಶೂಲ

★★★

'ವರ್ಣಮಾಲೆ ಸರಿಯಾಗಿ ಹೇಳುವ ಶಿಕ್ಷಕರಿಗೆ ನೊಬೆಲ್' - ಪ್ರೊ. ಜಿ.ವಿ.

ವಾರಣಮಾಳೆಯನು ಶರಿಯಾಕೇ ನಾವ್ ಎಂತೂ ಶೊಲ್ಲುವೆವೆಂದರು ಶಿಕ್ಷಕರು
no bel ಹೆಂದು bell ಹಿರತಿತ್ತರು ಗ್ಲಾಶ್ ನಡೆತುವೆವೆಂದಭಯವನಿತ್ತರು

★★★

'ಎರಡನೇ ಮದುವೆಗೆ ಸಜ್ಜಾದ ಪತಿಯ ವಿರುದ್ಧ ದೂರು' - ಸುದ್ದಿ

ಏನಚ್ಚರಿಯಿದು ನರನೆರಡನೆ ನರಕಕೆ ಹಾತೊರೆಯುವುದು
ಬುದ್ಧನಿಂದರಿಳಾರನೆ ಸೂಕ್ತವೆನೆ ಎಲ್ಲವ ತೊರೆವುದು

★★★

ಸೀ, ರಿಯಲ್ ಸೀರಿಯಲ್

- ಶಂಸ

ಪ್ರಿಯ ವಾಚಕರೇ, ಈಗ ನಾನು ನಿರೂಪಿಸಲಿರುವ ಸತ್ಯಕಥಾನಕವು ಮಹಾನಗರದ ಪೌಂಡ್ ಕಾಲೊನಿಯ ಎರಡನೆಯ ಹಂತದ ಮೂರನೆಯ ಮುಖ್ಯರಸ್ತೆಯ ಇಪ್ಪತ್ತಮೂರನೆಯ ಅಡ್ಡ ರಸ್ತೆಯ ಹದಿನೈದನೆಯ ನಂಬರ್ ಮನೆಯಲ್ಲಿ ವಾಸಿಸುತ್ತಿರುವ ವೃದ್ಧ ದಂಪತಿಗಳಿಗೆ ಸಂಬಂಧಿಸಿದ್ದು; ಹೆಂಗಸರು, ಮಕ್ಕಳು, ಗರ್ಭಿಣಿಯರು, ರೋಗಿಗಳು, ಮುದುಕ ಮುದುಕಿಯರು, ದುರ್ಬಲ ಹೃದಯದವರು ಎಂಬ ವ್ಯತ್ಯಾಸವಿಲ್ಲದೆ, ಎಲ್ಲರಿಗೂ ಗಟ್ಟಿಯಾಗಿ ಓದಿ ಹೇಳಬಹುದಾದ್ದು. ಯಾರೂ ಇದನ್ನು ಲೈಂಗಿಕ ಸಾಹಿತ್ಯದಂತೆ ಬಚ್ಚಿಟ್ಟು ಮುಚ್ಚಿಟ್ಟು ಗುಟ್ಟಾಗಿ ಓದಬೇಕಾಗಿಲ್ಲ. ಇದನ್ನು ಓದಿ ಮುಗಿಸಿದ ಮೇಲೆ ಇದು ಹಾಸ್ಯ ಮಾಸಪತ್ರಿಕೆಯಲ್ಲೇಕೆ ಎಂದು ನೀವು ಕೇಳಬಹುದು. ಬಹುದು ಏನು; ಕೇಳಿಯೇ ಕೇಳುತ್ತೀರಿ. ನಿಮ್ಮ ಈ ಪ್ರಶ್ನೆಗೆ ಮೊದಲೇ ಉತ್ತರಿಸುತ್ತೇನೆ. ಬದುಕೆಂಬುದು ಸಿಹಿಕಹಿಗಳ ಸಂಮಿಶ್ರಣ. ವಿನೋದಕ್ಕೂ ವಿಷಾದಕ್ಕೂ ಅವಿನಾಭಾವ ಸಂಬಂಧವಿದೆಯೆಂದು ತತ್ತ್ವಜ್ಞಾನಿಗಳು ಹೇಳುತ್ತಾರೆ... ಕ್ರೈಮ್ ಡೈರಿ, ಕ್ರೈಮ್ ಸ್ಟೋರಿಗಳಲ್ಲಿ ಆಗಾಗ ಕ್ರೈಮೇತರ ಎಪಿಸೋಡುಗಳು ಪ್ರಸಾರವಾಗುತ್ತವೆಯಲ್ಲ? ಇದೂ ಹಾಗೆಯೇ ಎಂದು ಭಾವಿಸಬೇಕಾಗಿ ವಿಜ್ಞಾಪಿಸುತ್ತೇನೆ.

ಪ್ರಿಯ ವಾಚಕರೇ, ಈ ವೃದ್ಧ ದಂಪತಿಗಳೇ ಪದ್ದಕ್ಕ ಆ್ಯಂಡ್ ಮಾರುತಿರಾವ್. ಇವರು ಕಳೆದ ಹತ್ತು ವರ್ಷಗಳಿಂದ ಪೌಂಡ್ ಕಾಲೊನಿಯ ನಿವಾಸಿಗಳಾಗಿದ್ದು, ಮಾರುತಿರಾವ್ ಮೊನ್ನೆಯಷ್ಟೇ ಸಹಸ್ರಚಂದ್ರ ದರ್ಶನ ಶಾಂತಿಯನ್ನು ಅದ್ದೂರಿಯಾಗಿ ಆಚರಿಸಿಕೊಂಡು, ನೂರಾರು ಜನರಿಗೆ ಅನ್ನ ಸಮರ್ಪಣೆ ನೆರವೇರಿಸಿ, ದಕದವರಂತೆ, ಅತಿಥಿಗಳಿಗೆ ತಲಾ ನೂರು ನೂರು ರೂ.ಗಳ ಆಗತಾನೇ ಬ್ಯಾಂಕಿನಿಂದ ತರಿಸಿದ ಹೊಸ ನೋಟುಗಳನ್ನು ದಕ್ಷಿಣೆಯಾಗಿ ನೀಡಿ, ಪುಣ್ಯಭಾಜನರಾಗಿದ್ದಾರೆ. ಆದರೆ ಅದೇನು ವಿಷಗಳಿಗೆಯೋ ನಿರೂಪಕನಿಗೆ ತಿಳಿಯದು; ಕಳೆದ ಮೇ ಎರಡನೆಯ ದಿನಾಂಕ ಮಂಗಳವಾರ ಸರಿ ರಾತ್ರಿ ಹನ್ನೆರಡು ಗಂಟೆ ವೇಳೆಗೆ ವಿಷಪ್ರಾಶನದಿಂದ ಅಸು ಕಳೆದುಕೊಂಡಿದ್ದಾರೆ. ಇವರು ಪರಸ್ಪರ ಚಿಯರ್ಸ್ ಹೇಳುತ್ತ ಸಂತೋಷದಿಂದ ಜೊತೆಯಾಗಿ ವಿಷಪಾನ ಮಾಡಿದರೇ ಅಥವಾ ಪರಸ್ಪರ ದ್ವೇಷದಿಂದ ಒಬ್ಬರು ಇನ್ನೊಬ್ಬರಿಗೆ ವಿಷ ಕುಡಿಸಿದರೇ ಎಂಬುದೇ ಈಗ ನಮ್ಮ ಎದುರಿಗಿರುವ ನಿಗೂಢ ಸಮಸ್ಯೆ.

ಸ್ಟೇಟ್-ಆಫ್-ದಿ-ಆರ್ಟ್ ಅಗ್ರಹಾರದಂತಿರುವ ಪೌಂಡ್ ಕಾಲೊನಿಯ ನಾಲ್ಕು ಬೆಡ್‌ರೂಮ್‌ಗಳ ಭವ್ಯ ಬಂಗಲೆಯೊಂದರಲ್ಲಿ ಇವರ ವಾಸ. ಇವರ ಆತ್ಮಹತ್ಯೆಗೆ ಅಥವಾ ಕೊಲೆಗೆ ನಿಖರ ಕಾರಣ ಲಭ್ಯವಾಗಿಲ್ಲ. ಇವರ ನೆರೆಮನೆಯ ವೃದ್ಧ ವೇದವ್ಯಾಸ ರಾಯರು ಹೇಳುವಂತೆ, ''ಇವರಿಗೆ ಯಾವುದೇ ಭೀಕರ ಸಮಸ್ಯೆಗಳಿರಲಿಲ್ಲ. ಪೆನ್‌ಷನ್ ಜೊತೆಗೆ ಮಗ ಮತ್ತು ಮಗಳಿಂದ ಪ್ರತಿ ತಿಂಗಳೂ ವಿದೇಶದಿಂದ ಹಣ ಬರುತ್ತಿತ್ತು. ದಂಪತಿಗಳು,

ನನಗೆ ತಿಳಿದ ಹಾಗೆ, ಅನ್ಯೋನ್ಯವಾಗಿದ್ದರು. ಮಗ, ಸೊಸೆ, ಮಗಳು, ಅಳಿಯ ಅಮೆರಿಕದಲ್ಲಿದ್ದರೂ ವಾರಕ್ಕೆರಡು ಸಲ ಫೋನ್ ಮಾಡಿ ಇವರ ಸುಖ ದುಃಖ ವಿಚಾರಿಸುತ್ತಿದ್ದರು. ಮಗಳು ಮತ್ತು ಸೊಸೆ - ಇವರಿಬ್ಬರ ಬಾಣಂತನಕ್ಕೂ, ಅಪ್ಪೆಮಿಡಿ ಉಪ್ಪಿನಕಾಯಿ ಮತ್ತು ಎಮ್‌ಟಿಆರ್ ಪುಡಿಗಳೊಂದಿಗೆ, ಅಮೆರಿಕಕ್ಕೆ ಹೋಗಿ, ಆರು ತಿಂಗಳ ಕಾಲ ಅಲ್ಲಿದ್ದು ಬಂದಿದ್ದರಲ್ಲ ಪದ್ದಕ್ಕ? ಆಗಲೂ ಒಬ್ಬರೇ ಸುಖವಾಗಿದ್ದರಲ್ಲ ಮಾರುತಿ ರಾವ್? ಇಂಥ ಸುಖೀ ಸಂಸಾರ ಆತ್ಮಹತ್ಯೆಗೆ ಶರಣಾಗುವ ಪ್ರಮೇಯವಾದರೂ ಏನಿತ್ತು?

ಇದೇ ಪ್ರಶ್ನೆ ಕೇಳಿಕೊಂಡು ಉತ್ತರ ಸಿಗದೆ ಮಹಾನಗರದ ಸಮಸ್ತ ನಾಗರಿಕರು, ಮುಖ್ಯವಾಗಿ ಮಕ್ಕಳನ್ನು ಎಮ್‌ಎನ್‌ಸಿಗಳಿಗೆ ಮಾರಾಟ ಮಾಡಿ ಇಂಡಿಯದಲ್ಲಿ ಮಕ್ಕಳಿಂದ ದೂರವಾಗಿ ನರಳುತ್ತಿರುವ ತಂದೆ ತಾಯಿಗಳು, ದಿಗ್ಭ್ರಾಂತರಾಗಿದ್ದಾರೆ. ಪ್ರಿಯ ವಾಚಕರೇ, ಈ ದಂಪತಿಗಳ ದಿನಚರಿಯನ್ನೂ, ಕಳೆದೆರಡು ವರ್ಷಗಳಿಂದ ಮೆಗಾಧಾರಾವಾಹಿಗಳಂತೆ ತಪ್ಪದೆ ವೀಕ್ಷಿಸುತ್ತಿರುವ ಹನುಮಂತ ರಾವ್ ಹೇಳುವಂತೆ, ''ಇವರು ಬೆಳಿಗ್ಗೆ ಬೇಗ, ಹತ್ತು ಗಂಟೆಯ ವೇಳೆಗೇ ಏಳುತ್ತಿದ್ದರು. ಮಾರುತಿರಾವ್ ಸ್ನಾನಾಹ್ನಿಕ ಪೂಜೆ ಪ್ರಾರ್ಥನೆ ಧ್ಯಾನಗಳಲ್ಲಿ, ಪೇಪರ್ ಓದುವುದರಲ್ಲಿ ಮಧ್ಯಾಹ್ನದ ವರೆಗೆ ಕಾಲ ಕಳೆಯುತ್ತಿದ್ದರು. ಪದ್ದಕ್ಕ ಒಂದೇ ಕಂತಿನಲ್ಲಿ ಬೆಳಿಗ್ಗೆಯ ತಿಂಡಿ ಮತ್ತು ಮಧ್ಯಾಹ್ನ-ರಾತ್ರಿಗಳ ಊಟಗಳ ಅಡಿಗೆ ತಯಾರಿಸುತ್ತಿದ್ದರು. ಆಗಾಗಿ 'ಸವಿರುಚಿ' ಕಾರ್ಯಕ್ರಮದಿಂದ ಕಲಿತ ಅಡಿಗೆಯನ್ನು ಮಾಡಿ ಬಡಿಸಿ ಗಂಡನನ್ನು ದಂಗುಬಡಿಸುತ್ತಿದ್ದರು. ಇವರ ನಿಜವಾದ ಬದುಕು ಶುರುವಾಗುತ್ತಿದ್ದುದೇ ಈ ಟೀವಿಯ 'ಬದುಕು' ಧಾರಾವಾಹಿಯಿಂದ. ಮುಂದಿನ ಈಟೀವಿ ಆಟೀವಿಗಳ ಎಲ್ಲ ಸೀರಿಯಲ್‌ಗಳನ್ನೂ ಪರಸ್ಪರ ಒಪ್ಪಂದದಿಂದ ಪಾಲು ಮಾಡಿಕೊಂಡು ಒಬ್ಬರು ಟೀವಿ ನೋಡುತ್ತಿರುವಾಗ ಇನ್ನೊಬ್ಬರು ವಿಶ್ರಾಂತಿ ಪಡೆಯುತ್ತ ಕೆಲವು ಧಾರಾವಾಹಿಗಳನ್ನು ಅಕ್ಕಪಕ್ಕ ಕುಳಿತು ನೋಡುತ್ತ ಕಾಲಹರಣ ಮಾಡುತ್ತಿದ್ದರು. ಏಳು ಗಂಟೆಯ ''ಜಗಳಗಂಟಿಯರ ಕಾಲದಲ್ಲಿ ಪ್ರಣಯ ಕಲಹ ಮಾಡಿದರೂ ಹತ್ತು-ಹತ್ತೂವರೆ ಅವಧಿಯ ಕ್ರೈಮ್ ಡೈರಿಯನ್ನು ಮಾತ್ರ ಪಿಸುಮಾತೂ ಆಡದೆ ತಲ್ಲೀನತೆಯಿಂದ ನೋಡುತ್ತಿದ್ದರು.''

ಇರಲಿ, ಇಂತಹ ಸಂಸಾರದಲ್ಲಿ ವಿರಸಕ್ಕೆ, ವಿಷಾದಕ್ಕೆ ಎಡೆಯೆಲ್ಲಿ?

ಪ್ರಿಯ ವೀಕ್ಷಕರೇ, ನನ್ನದೂ ಇದೇ ಪ್ರಶ್ನೆಯಾಗಿದೆ. ತಂದೆ ತಾಯಿಗಳ, ಅತ್ತೆ ಮಾವಂದಿರ ದಾರುಣ ದುರಂತದ ಅಸಹನೀಯ ಸುದ್ದಿಯನ್ನು ತಿಳಿದ ಮಗ ಮಗಳು ಸೊಸೆ ಅಳಿಯಂದಿರು ಕಂಗಾಲಾಗಿ ವಿಮಾನದಲ್ಲಿ ಧಾವಿಸಿ ಬರುತ್ತಿದ್ದಾರೆ ಅವರು ಮಾತೃಭೂಮಿಯನ್ನು ತಲುಪುವ ವೇಳೆಗೆ ವೃದ್ಧ ದಂಪತಿಗಳ ಪೋಸ್ಟ್ ಮಾರ್ಟಮ್ ವರದಿಯೂ ಬರುವ ನಿರೀಕ್ಷೆಯಿದ್ದು ಆಗ ಇನ್ನಷ್ಟು ಮಾಹಿತಿಗಳು ದೊರೆಯಬಹುದು. ಆದುದರಿಂದ ಸದ್ಯ ಇಲ್ಲಿಗೇ ಶಾಂತಿ ಹಾಡೋಣ.

ಪ್ರಿಯ ವೀಕ್ಷಕರೇ, ಮುಂದಿನ ಭಾಗದಲ್ಲಿ ನಿರೀಕ್ಷಿಸಿ

ಹುರುಳಿ ಕಟ್ಟು....

ಕಾರ್ಮಿಕರು ಮತ್ತು ಬದ್ಧತೆ...!

- ಎಚ್. ಗೋಪಾಲಕೃಷ್ಣ

ಕಾರ್ಮಿಕರು ಸಂಘಟನೆಗಳು ಎಂದರೆ ಯಾವಾಗಲೂ ಸ್ಟ್ರೈಕು ಸಂಪು ಇವುಗಳಲ್ಲಿ ಮುಳುಗಿರುವ, ದೇಶದ ಮತ್ತು ಜನಸಾಮಾನ್ಯರ ಬಗ್ಗೆ ಕೊಂಚವೂ ಕಾಳಜಿ ಇಲ್ಲದ ಜನರಿಂದ ಕೂಡಿದ ಒಂದು ಗುಂಪು ಎನ್ನುವ ಸಾಮಾನ್ಯ ಮನೋಭಾವ ನಮ್ಮಲ್ಲಿದೆ. ಯಾವಾಗಲೇ ಆಗಲೀ ಈ ಗುಂಪು ನಮ್ಮ ಹಕ್ಕಿಗಾಗಿ, ತಮ್ಮ ಜೀವನ ಮಟ್ಟವನ್ನು ಏರಿಸಿಕೊಳ್ಳಲು ಸಂಪು ಹೂಡಿದಾಗಲೂ ಜನ ಮತ್ತು ಮಾಧ್ಯಮಗಳು ಇವರನ್ನು ದೇಶದ್ರೋಹಿಗಳು ಎಂಬಂತೆಯೇ ಬಿಂಬಿಸುತ್ತಾರೆ ಮತ್ತು ಈ ಗುಂಪಿನ ಜನರೂ ಸಾವಿರ ಸಲ ಅದೇ ಮಾತುಗಳನ್ನು ಓದಿ ಕೇಳಿ ತಾವೂ ಸಮಾಜದ ಪಿಡುಗಿರಬಹುದೇ ಎಂಬ ಸಂಶಯಗಳಿಗೆ ಈಡಾಗಿಬಿಟ್ಟಿರುತ್ತಾರೆ.

ಕೆಲವು ಸಲ ತಮಗೆ ಆಗುತ್ತಿರುವ ಅನ್ಯಾಯ ಹಾಗೂ ಶೋಷಣೆಯ ಬಗ್ಗೆಯೂ ಕಮಕ್ ಕಿಮಕ್ ಎಂದು ಪ್ರತಿಭಟನೆಯ ಸೊಲ್ಲೂ ಎತ್ತುವುದಿಲ್ಲ! ಈ ಯೋಚನೆ ನನಗೆ ಹಲವಾರು ವರ್ಷಗಳಿಂದ ಕಾಡುತ್ತಾ ಬಂದಿದೆ. ಸಾರ್ವಜನಿಕ ಉದ್ಯಮವೊಂದರಲ್ಲಿ ಸುಮಾರು ವರ್ಷದಿಂದ ಸೇವೆಯನ್ನು ಸಲ್ಲಿಸುತ್ತಾ ಬಂದಿರುವ ನನಗೆ ಯಾಕೆ ನಮ್ಮ ನೌಕರರು ತಮ್ಮ ಯೋಚನಾಧಾಟಿಯನ್ನು ಬದಲಿಸಿಕೊಳ್ಳಬಾರದು, ಯಾಕೆ ಮಾಧ್ಯಮಗಳು ನಮ್ಮನ್ನು ರಾಕ್ಷಸರಂತೆ ಚಿತ್ರಿಸುತ್ತವೆ ಎಂಬ ಬಗ್ಗೆ ಆಗಾಗ ಕಾಡಿದೆ.

ಈ ಹಿನ್ನೆಲೆಯಲ್ಲಿ ಮೊನ್ನೆ ನನ್ನ ಮನಸ್ಸಿಗೆ ತುಂಬಾ ಹಿಡಿಸಿದ, ನನ್ನ ನವಿರು ಭಾವನೆಗಳನ್ನು ಕೆಣಕಿದ ಮತ್ತು ಹೃದಯವನ್ನು ಕೊಂಚ ಆರ್ದ್ರ ಮಾಡಿದ ಒಂದು ಪ್ರಸಂಗವನ್ನು ನಿಮಗೆ ಹೇಳಲೇ ಬೇಕು.

ನಾನು ಉದ್ಯೋಗ ಸಲ್ಲಿಸುತ್ತಿರುವ ಕೇಂದ್ರ ಸಾರ್ವಜನಿಕ ಉದ್ಯಮವಾದ ಭಾರತ್ ಎಲೆಕ್ಟ್ರಾನಿಕ್ಸ್ ಸಂಸ್ಥೆ 1954 ರಲ್ಲಿ ಸ್ಥಾಪಿತವಾಯಿತು ಮತ್ತು ನಂತರದ ಎರಡು ವರ್ಷದಲ್ಲಿ ಇಲ್ಲಿನ ಪ್ರಮುಖ ಕಾರ್ಮಿಕ ಸಂಘಟನೆ ಶುರುವಾಯಿತು.

ಕಳೆದ ಐವತ್ತು ವರ್ಷಗಳಿಂದ ಈ ಸಂಘಟನೆ ಕಾರ್ಮಿಕರ ಹಲವು ಹೋರಾಟಗಳಿಗೆ ಸ್ವರೂಪ ನೀಡಿರುವುದೇ ಅಲ್ಲದೇ ಸಾಮಾಜಿಕವಾಗಿ ಹಲವಾರು ಉತ್ತಮ ಕಾರ್ಯಗಳನ್ನು ನಡೆಸಿದೆ. ಅವುಗಳಲ್ಲಿ ಬಹು ಪ್ರಮುಖವಾದದ್ದೆಂದರೆ ಕಾರ್ಖಾನೆಗೆ 25 ವರ್ಷ ತುಂಬಿದಾಗ ನೌಕರರಿಗೆ ಆಡಳಿತ ವರ್ಗ ಕಾಣಿಕೆ ರೂಪದಲ್ಲಿ ನೀಡಬಹುದಾಗಿದ್ದ ಮೊತ್ತವನ್ನು ಕಾಲೇಜು ಆರಂಭಿಸಲು ವಿನಿಯೋಗಿಸುವ ಸೂಚನೆ ನೀಡಿ ಅದನ್ನು ನೌಕರರು ಒಪ್ಪುವಂತೆ ಮನವೊಲಿಸಿದ್ದು. ಪರಿಸರ ಸಂರಕ್ಷಣೆಯಲ್ಲಿ ಕಾಳಜಿ ವಹಿಸಿ ಕಾರ್ಖಾನೆಯ ಸುತ್ತಮುತ್ತ ಹಸಿರು ವನಗಳ ನಿರ್ಮಾಣವಾಗಲು ಆಡಳಿತವರ್ಗದ ಮನವೊಲಿಸಿದ್ದು... ಇತ್ಯಾದಿ. ಈಗ ಆ ಕಾಲೇಜು ಅತ್ಯಂತ ಸಮೃದ್ಧವಾಗಿ ಬೆಳೆದಿದೆ ಮತ್ತು

ಹಲವು ಸಾವಿರ ಜನರಿಗೆ ಜ್ಞಾನ ದಾಸೋಹ ನೀಡಿದೆ. ಕಾರ್ಖಾನೆಯ ಸುತ್ತ ಮುತ್ತ ಹಸಿರಿನ ಸಿರಿ ಕಂಗೊಳಿಸುತ್ತಿದೆ ಮತ್ತು ಮರಗಳ ತಂಪು ನೆರಳನ್ನು ಕಂಡ ಕೂಡಲೇ ಅರ್ಧ ತಾಸು ಕುಳಿತು ಹೋಗೋಣವೆನಿಸುತ್ತದೆ.

ಮೊನ್ನೆ ಈ ಸಂಘಟನೆಯ ಸುವರ್ಣ ಸಂಭ್ರಮದ ಆಚರಣೆಯ ಪ್ರಾರಂಭೋತ್ಸವ ನಡೆಯಿತು. ಈ ಸಮಾರಂಭದಲ್ಲಿ ಅದೇನೇನು ಭಾಷಣ ಸನ್ಮಾನಗಳು ನಡೆದುವೋ ಅದು ಕೆಲವೇ ದಿನಗಳಲ್ಲಿ ನಮ್ಮ ನೆನಪಿನಿಂದ ಮಾಸಬಹುದು: ಆದರೆ ಒಂದು ಪ್ರಸಂಗ ಮಾತ್ರಾ ಇಡೀ ಜೀವಮಾನದಲ್ಲಿ ಮನಸ್ಸಿನಿಂದ ಮರೆಯಾಗದ ಹಾಗೆ ತನ್ನ ಮುದ್ರೆಯನ್ನು ಬಿಟ್ಟಿರುವಂಥಹದ್ದು.

ಅಂದು ಈ ಸಂಘಟನೆ ಸಮಾಜದ ಬಗ್ಗೆ ತನ್ನ ಬದ್ಧತೆಯನ್ನು ನೊಂದವರ ಬಗ್ಗೆ ತನಗಿರುವ ಕಾಳಜಿಯನ್ನು ತೋರಿದ ರೀತಿ ಅತ್ಯಂತ ವಿಶಿಷ್ಟವಾಗಿತ್ತು. ಅಂಗವಿಕಲತೆಯಿಂದ ನರಳುತ್ತಿರುವ ಸಮಾಜದ ಆರ್ಥಿಕ ಹಾಗೂ ಸಾಮಾಜಿಕವಾಗಿ ಅತಿ ಹಿಂದುಳಿದ ಅಂಗವಿಕಲರಿಗೆ ಅಂದು ಈ ಸಂಘಟನೆ ಐವತ್ತು ಗಾಲಿ ಕುರ್ಚಿಗಳನ್ನು ವಿತರಿಸಿತು. ಐವತ್ತು ವಿವಿಧ ವಯಸ್ಸಿನ ಪುಟ್ಟ ಕಂದಮ್ಮಗಳು, ವಯಸ್ಕರು, ವಯೋವೃದ್ಧರು ಮತ್ತು ಹೆಣ್ಣು ಮಕ್ಕಳು ಈ ಕುರ್ಚಿಗಳನ್ನು ಸ್ವೀಕರಿಸುತ್ತಿರುವಾಗ ಅಲ್ಲಿ ನೆರೆದವರ ಮನದಲ್ಲಿ ಒಂದು ರೀತಿಯ ಹೇಳಿಕೊಳ್ಳಲಾರದ ವೇದನೆಯ ಸಂಗಡವೇ ಸಮಾಜದ ಮುಖ್ಯವಾಹಿನಿಗೆ ತಮ್ಮ ಕೊಡುಗೆ ಏನಿರಬೇಕು ಎಂಬುವ ಯೋಜನೆಗಳು ಶುರುವಾಗಿತ್ತು.

ನಾಲ್ಕು ವರ್ಷದ ಎರಡೂ ಕಾಲುಗಳಿಲ್ಲದ ಪುಟ್ಟ ಹೆಣ್ಣು ಕೂಸಿನ ಸಂಗಡವೇ ಅರವತ್ತರ ವಯೋವೃದ್ಧರೂ ವೇದಿಕೆಯ ಮೇಲೆ ಮತ್ತೊಬ್ಬರಿಂದ ಹೊರಿಸಿಕೊಂಡು ಬಂದು ಈ ಗಾಲಿ ಕುರ್ಚಿಗಳ ಮೇಲೆ ಕೂತು ಅತ್ತ ಸರಿದಾಗ ನೋಡುವವರ ಕಣ್ಣಿನ ಅಂಚಿನಲ್ಲಿ ನೀರು ಇಣುಕಿತ್ತು.

ಟ್ರೇಡ್ ಯೂನಿಯನ್ನುಗಳು ಎಂದರೆ ಯಾವಾಗಲೂ ತಮ್ಮ ಸಾರಿಗೆ ಸವಲತ್ತುಗಳ ಬಗ್ಗೆಯೇ ಚಿಂತಿಸುವ ಸಮಾಜದ ಇತರರ ಬಗ್ಗೆ ಯಾವುದೇ ರೀತಿಯ ವಾಂಛಲ್ಯವಿರದ ಕಲ್ಲು ಮನಸ್ಸಿನ ಪಶುಗಳು ಎಂದು ತಿಳಿದಿದ್ದ ಕೆಲವೇ ಕೆಲವು ವ್ಯಕ್ತಿಗಳಿಗಾದರೂ ಅಂದಿನ ಈ ಮನಕಲಕುವ ಸನ್ನಿವೇಶಗಳು ಹೃದಯ ತಟ್ಟಿರಬಹುದು. ಸೋಜಿಗದ ಸಂಗತಿ ಎಂದರೆ ಈ ವಾರ್ತೆಯನ್ನು ಬಿಂಬಿಸಲು ಅಂದು ಅಲ್ಲಿ ಯಾವ ಪತ್ರಕರ್ತರೂ ಇರದಿದ್ದುದು.

ಇನ್ನೂ ಇಂಥಹ ಹಲವಾರು ಸಮಾಜ ಸೇವೆಯ ಕಾರ್ಯಕ್ರಮಗಳನ್ನು ಹಮ್ಮಿಕೊಳ್ಳಿ ನಮ್ಮ ನೆರವು ಸದಾ ನಿಮಗಿದೆ ಎಂದು ಕಾರ್ಮಿಕರೊಬ್ಬರು ಮಿಕ್ಕವರ ಮನಸ್ಸಿನ ನುಡಿಯನ್ನು ಗಟ್ಟಿಯಾಗಿ ಹೇಳಿದರು. ಗಾಲಿ ಕುರ್ಚಿಯ ಹಂಚಿಕೆಯಲ್ಲಿ ಸಂಪೂರ್ಣ ನೆರವಾದವರು ದಾರ್ತಿ ಎಂಬ ತಮಿಳು ಕ್ರಿಶ್ಚಿಯನ್ ಮಹಿಳೆ. ಅಂದಹಾಗೆ ಇವರಿಗೆ ಎರಡೂ ಕಾಲುಗಳಿಲ್ಲ ಮತ್ತು ಈ ವಿಕಲತೆ ಅವರ ಸಮಾಜ ಸೇವೆಗೆ ಯಾವ ಕುಂದನ್ನೂ ಉಂಟು ಮಾಡಿಲ್ಲ. ಅವರ ತಂದೆ ಮಗಳ ಈ ಕಾರ್ಯದಲ್ಲಿ ಹೆಗಲಿಗೆ ಹೆಗಲನ್ನು ನೈಜಾರ್ಥದಲ್ಲಿ ನೀಡಿ ನೆರವಾಗುತ್ತಿದ್ದಾರೆ.

ಮೇಡಂ ದಾರ್ತಿಯವರ ಕತೆಯನ್ನು ನಿಮಗೆ ಇನ್ನೊಮ್ಮೆ ತಿಳಿಸುತ್ತೇನೆ.

ಹನುಮಪ್ಪ ಆದರೂ ಸಾಕು....

- ಪ್ರಭಾ

"ನಮ್ಮ ರಿಶೀನ ಹೇಗೆ ನೋಡ್ಕೋತೀವೀ ಗೊತ್ತಾ..."

ಅಮೆರಿಕಾದಿಂದ ಬಂದು ಇಲ್ಲೇ ಸೆಟಲ್ ಆಗಿದ್ದ ಬಂಧುವೊಬ್ಬರ ಮನೇಗೆ ಮೊನ್ನೆ ಹೋಗಿದ್ದೆವು. ದೊಡ್ಡ ಮನೆ - ಹತ್ತೋ ಹದಿನೈದೋ ರೂಂಗಳು ಪ್ರತಿಯೊಂದಕ್ಕೂ ಅಮೇರಿಕದ ಅಲಂಕಾರ. ಅಲಂಕಾರ ಅಂದರೆ ಹೇಗೇ ಅಂತೀರೀ? ಮನೆ ಹಾಲಿನ ಮೂಲೆ ಮೂಲೆಯಲ್ಲೂ ಕೈಯಲ್ಲಿ ಬಿಲ್ಲು ಬಾಣ ಹಿಡಿದು ನಮ್ಮುದ್ದಕ್ಕೂ ನಿಂತಿರೋ ಅಮೇರಿಕನ್ ಸೈನಿಕರ ಲೋಹದ ಬೊಂಬೆಗಳು, ಗೋಡೆ ಮೇಲೆ ಕಡು ಹಸಿರು ಬಣ್ಣದ ಬೀಚಿನ ಫೋಟೋಗಳು, ಹಾಲಿನ ತುಂಬಾ ಹಾಕಿರೋ ಸೋಫಾದಲ್ಲಿ ಒಂದೇ ಒಂದು ಗುಲಗಂಜಿಯಷ್ಟು ಧೂಳು ಕೊಳೇ ಇಲ್ಲವೇ ಇಲ್ಲಾ: ನೋಡಿದ ಕಡೆಯೆಲ್ಲವೂ ಕ್ಲೀನು ಕ್ಲೀನು-ಸೋಫಾದ ಮೇಲೆ ನೀವು ಕೂರಬೇಕೂಂದರೆ ನಿಮ್ಮ ಬಟ್ಟೆಯಿಂದ ಅದು ಕೊಳೆಯಾಗುತ್ತೋ ಅಂಬೋ ಭಯ ಮುಜುಗರದಿಂದಲೇ ನೀವು ಕೂಡಬೇಕು - ಹಾಗೆ...

ಮನೇಲಿ ಮಕ್ಕಳು ಯಾರೂ ಇರಲಿಲ್ಲ, ಮಧ್ಯ ವಯಸ್ಸು ದಾಟಿದ ಗಂಡ ಹೆಂಡತಿ. ಯಾಕೋ ವಿಷಯ ಮನೇಲಿ ಮಕ್ಕಳನ್ನು ನೋಡಿಕೊಳ್ಳುವುದರ ಬಗ್ಗೆ ಹರಿದಿತ್ತು. ಆಗ ಮನೆ ಯಜಮಾನಿ ಅವರ ಮಗೂ ರಿಶೀನ ನೋಡಿಕೊಳ್ಳುವ ಸಂಗತಿ ತೆಗೆದರು.

"ನಮ್ಮ ಮೇಲಿನ ರೂಮಿನ ಏ ಸೀ ರೂಮನ್ನೇ ಅವಳಿಗೆ ಬಿಟ್ಟುಬಿಟ್ಟಿದೀವಿ. ಅವಳಿಗೆ ಅಂತಲೇನೇ ಇಬ್ಬರು ಅಟೆಂಡರ್ಸನ್ನು ಗೊತ್ತು ಮಾಡಿದೀವಿ. ಅವಳಿಗೆ ಬೇಜಾರು ಆಗದೇ ಇರಲೀ ಅಂತ ಪ್ರತಿ ದಿವಸ ಸಾಯಂಕಾಲ ಅವಳನ್ನ ಕಾರಿನಲ್ಲಿ ಕಬ್ಬನ್ ಪಾರ್ಕಿಗೆ ಕರೆದುಕೊಂಡು ಹೋಗ್ತೀವಿ. ಯಾವಾಗಲೂ ಕ್ಲೀನಾಗಿರಬೇಕು ಅದಕ್ಕೆ ಅವಳಿಗೆ ದಿವಸಕ್ಕೆ ಎರಡು ಸಲ ಸ್ನಾನ ಸೆಂಟು ಪೌಡರು ಇದೆಲ್ಲಾ ನೋಡಿಕೊಳ್ಳೋದಕ್ಕೇ ಅಂತಲೇನೆ ಒಬ್ಬರು ಕೇರ್‌ಟೇಕರೂ ಇದಾರೆ..." ಆಶ್ಚರ್ಯದಿಂದ ಅವರ ಮಾತನ್ನು ಕೇಳುತ್ತಾ ಕೂತಿದ್ದೆ.

"... ಅವಳಿಗೆ ಅಂತಲೇನೇ ಒಬ್ಬರು ಪೇಡಿಯಾಟ್ರೀಷಿಯನ್ನು ವಾರಕ್ಕೆ ಮೂರು ಸಲ ಬಂದು ನೋಡ್ಕೋತಾರೆ. ಮೊನ್ನೆ ಅವಳಿಗೆ ಒಂದು ಪಾರ್ಟಿ ಮಾಡಿದೆವು. ಸಿಟೀನಲ್ಲಿರೋ ಎಲ್ಲಾ ಎಲೈಟ್ಸೂ ಬಂದಿದ್ದರು. ಅವಳಿಗೆ ಅಂತಲೇನೇ ಒಂದು ಮ್ಯೂಸಿಕ್ ಸಹ ಏರ್ಪಾಡು ಮಾಡಿದ್ದೆವು. ಶಿ ಎಂಜಾಯಡ್ ದಿ ಮ್ಯೂಸಿಕ್ ವೆರಿ ವೆಲ್..."

"ಎಷ್ಟು ವರ್ಷ ರಿಶೀಗೆ...?" ಅಂದೆ - ಸ್ಕೂಲುಗೀಲಿಗೆ ಹೋಗುತ್ತೋ ಸ್ಕೂಲಿಗೆ ಹೋಗೋ ಹಾಗಿದ್ದರೆ ಯಾವ ಸ್ಕೂಲಿಗೆ ಸೇರಿಸಿದಾರೆ ಅಂತ ತಿಳಿದುಕೊಳ್ಳೋಣಾ ಅಂತ. ಅಂತಹ ಸ್ಕೂಲನ್ನ ದೂರದಿಂದಲೇ ನೋಡಿಕೊಂಡು ಬರಬೇಕು ಅಂತ ಅನಿಸಿತ್ತು.

ಫಾರಿನ್ ನವರ ಮಕ್ಕಳು ಅದು ಯಾವ ಸ್ಕೂಲಿನಲ್ಲಿ ಓದಿಸುತ್ತಾರೋ ಅಂತಹ ಸ್ಕೂಲುಗಳನ್ನ ದೂರದಿಂದಲೇ ತಾನೇ ನಾವೂ ನೋಡೋಕ್ಕೆ ಆಗೋದೂ? ನಮಗೆ ಗೊತ್ತಿರೋ ಇಂಥವರ ಮಗು ಆ ಸ್ಕೂಲಿನಲ್ಲಿ ಓದ್ತಿದೆ ಅಂತ ಹೆಮ್ಮೆಯಿಂದ ಯಾರ ಎದುರಿಗಾದರೂ ನಾವು ಹೇಳ್ಕೋಬೋದಲ್ಲಾ...

''ಶಿ ಈಸ್ ಜಸ್ಟ್ ಟ್ವೆಲ್ ವ್ ಮಂತ್ಸು...'' ಅಂದರು!

''ನಿಂತ್ಕೋತಾಳಾ...' ನಮ್ಮ ರಸ್ತೆಯ ಕೊನೇ ಮಗು ದುಂಡಗೆ ಹೇಗಿದೆ ಅಂತೀರೀ? ನೋಡಿದ ಕೂಡಲೇ ತಬ್ಬಿಕೊಂಡು ಮುದ್ದಾಡಿಬಿಡೋಣಾ ಅನ್ನಿಸುತ್ತೆ...'' ಮಗು ನಿಂತ್ಕೊಳ್ಳೋ ಹಾಗಿದ್ದರೆ ಅವನ್ನ ಎತ್ತಿಕೊಂಡು ತಿರುಗಬೇಕಿಲ್ಲ. ದುಂಡಗಿರೋ ಮಕ್ಕಳನ್ನ ಎತ್ತಿಕೊಳ್ಳೋದೂ ಅಂದರೆ ಭುಜ ಬಿದ್ದು ಹೋಗುತ್ತೆ - ಗೊತ್ತೂ ತಾನೇ? ''ನಮ್ಮ ರಿಶೀನು ಅಷ್ಟೇ ಮುದ್ದಾಗಿದಾಳೆ. ವೆರಿ ಕ್ಯೂಟ್. ನೆಕ್ಸ್ಟ್ ಮಂತು ಅವಳ ಬರ್ತ್ ಡೇ ಮಾಡ್ತೀವಿ. ಕೆಲವು ರಿಸಾರ್ಟ್‌ನಲ್ಲಿ ಮಕ್ಕಳಿಗೆ ಅಷ್ಟೊಂದು ಪ್ಲೇ ಗೇಂಸು ಇರೋಲ್ಲಾ. ನೋಡೀ ಅದಕ್ಕೇ ಬೆಂಗಳೂರಿನಲ್ಲಿರೋ ರಿಸಾರ್ಟ್‌ಗಳ ಅಡ್ರೆಸ್ಸೆಲ್ಲಾ ತರಿಸಿದೀನಿ. ಮಕ್ಕಳಿಗೆ ಎಲ್ಲಿ ಚೆನ್ನಾಗಿ ಟ್ರೀಟ್ ಮಾಡ್ತಾರೆ ಅಂತ ಪತ್ತೆ ಹಚ್ತಾ ಇದೀನಿ... ನೀವೂ ಬರಬೇಕು ಬರ್ತ್ ಡೇಗೇ...''

''ಮಗೂ ಬರ್ತ್ ಡೇ ಅಂದರೆ ಬರದೇ ಇರ್ತೀವಾ ಖಂಡಿತ ಬರ್ತೀವಿ. ಮೊನ್ನೆ ಕಳೆದ ತಿಂಗಳು ಅದೇ ನಮ್ಮ ರಸ್ತೆ ಕೊನೇ ಮನೆ ಮಗೂ ವಿಷಯ ಹೇಳಿದೆನಲ್ಲಾ ಅದರ ಬರ್ತ್ ಡೇ ಇತ್ತು. ಮಧ್ಯಾಹ್ನ ಅವರು ಬರ್ತ್ ಡೇ ಮಾಡಿದ್ರೂ. ನಮ್ಮ ರೋಡಿನವರೆಲ್ಲರೂ ಹೋಗಿದ್ದೆವು. ಮಗು ಅದೆಷ್ಟು ಮುದ್ದಾಗಿ ನಮ್ಮ ಜತೆ ಆಟ ಆಡಿಕೊಂಡಿತ್ತೂ ಅಂತೀರೀ... ಮಕ್ಕಳು ಅಂದರೆ ನಮಗೂ ಪಂಚಪ್ರಾಣಾ... ಎಲ್ಲಿ ರಿಶಿ ನಿದ್ದೆ ಮಾಡ್ತಾ ಇದೆಯಾ. ಅವಳನ್ನ ನೋಡಿಕೊಂಡು ಹೊರಡ್ತೀವೀ...'' ದುಂಡಗಿರೋ ಮಗು ಆದರೆ ಅದರ ಕೆನ್ನೆ ಗಿಲ್ಲಿಬಿಟ್ಟು ಅಳಿಸಿ ಅದರ ಕೈಗೆ ಹತ್ತೋ ಇಪ್ಪತ್ತೋ ತುರುಕಿ ಮುಂದಿನ ತಿಂಗಳು ಅದರ ಬರ್ತ್ ಡೇಗೆ ಆಹ್ವಾನ ಗಿಟ್ಟಿಸಿಕೊಳ್ಳೊ ಪ್ಲಾನು ನಮ್ಮದು. ದೊಡ್ಡವರ ಮನೆ ಮಕ್ಕಳ ಬರ್ತ್ ಡೇ ಅಂದರೆ ತುಂಬಾ ಮೊಪಾಗೇ ಇರುತ್ತೆ; ಅದೂ ಅಲ್ಲದೇ ದಿ ಬೆಸ್ಟ್ ರಿಸಾರ್ಟಿನಲ್ಲಿ ಬರ್ತ್ ಡೇ ಅಂದರೆ ಸಕತ್ ಊಟ ತಿಂಡಿ ಇರುತ್ತೆ. ತಿಂಗಳಿಗೆ ಆರ್ನೂರರೂ ಚಿಲ್ಲರೆ ಸಂಬಳ ತಗೊಳ್ಳೋನಿಗೆ ರಿಸಾರ್ಟುಗಳನ್ನ ನೋಡೋದಿಕ್ಕೆ ಇದಕ್ಕಿಂತ ಬೇರೆ ಅವಕಾಶ ಸಿಗುತ್ತದೆಯೇ?

''ಇರಿ ಅವಳನ್ನ ಕರೆದುಕೊಂಡು ಬರೋಕ್ಕೆ ಹನುಮಪ್ಪನಿಗೆ ಹೇಳ್ತೀನೀ... ಲೋ ಹನುಮಪ್ಪಾ ಬ್ರಿಂಗ್ ರಿಶೀ ಹಿಯರ್...''

ಬಿಳಿದಾದ ಗರಿ ಗರಿಯಾದ ಯೂನಿಫಾರಮ್ಮು ಧರಿಸಿದ, ದೂರದಿಂದಲೇ ಫಾರಿನ್ ಸೆಂಟಿನ ವಾಸನೆಯನ್ನು ಘಂ ಅಂತ ಹರಿಸುತ್ತಿದ್ದ ಹನುಮಪ್ಪ ಓಡಿಬಂದ. ಓಡುತ್ತಲೇ ಮಹಡಿ ಹತ್ತಿದ. ಕೆಳಗೆ ಬರುತ್ತಾ ಎದೆಗೆ ಅವುಚಿಕೊಂಡು ಪುಟ್ಟ ಕೂಸನ್ನು ಹೊತ್ತು ತರುವ

ಹಾಗೆಯೇ ಒಂದು ಬಿಳಿಯ ಪೊಮೇರಿಯನ್ ನಾಯಿ ಮರಿಯನ್ನ ಎತ್ತಿಕೊಂಡು ಒಳಗೆ ಬಂದ.


''ಹಾಯ್ ರಿಶೀ ಎಷ್ಟು ಹೊತ್ತು ನಿದ್ದೆ ಮಾಡಿಬಿಟ್ಟೆಯಮ್ಮಾ? ನೋಡು ಅಂಕಲ್ಲು ಆಂಟಿ ಬಂದಿದಾರೆ ನಿನ್ನನ್ನು ನೋಡಬೇಕೂಂತಲೇ ಅವರಿಗೆ ತ್ಯಾಂಕ್ಸ್ ಹೇಳು...'' ಅಂತ ಲೊಚಲೊಚನೆ ರಿಶೀನ ಮನೆ ಯಜಮಾನಿ ಮುದ್ದಿಸಿದರು. ಪೊಮೇರಿಯನ್ನು ವೊವ್ ವೊವ್ ಅಂತ ದೂರದಿಂದಲೇ ನಮಗೆ ತ್ಯಾಂಕ್ಸ್ ಹೇಳಿತು. ಮತ್ತೂ ಒಂದು ಗಂಟೆ ಅವರ ಮನೇಲಿ ಕೂತು ರಿಶಿ ಗುಣಗಾನ ಕೇಳಿಕೊಂಡು ಹೊರಬಿದ್ದೆವು.

''ಅವರ ಮನೇಲಿ ನಾಯಿಯಾಗಾದರೂ ಹುಟ್ಟಿ ಸುಖ ಅನುಭವಿಸಬೇಕೂರೀ...''

''ನಾಯೀಗೇ ಹೋದೆ, ಹನುಮಪ್ಪ ಆದರೂ ಸಾಕು...'' ಅಂದೆ!

''ನಾಯಿ ಜನ್ಮ ಅಂತ ನಮ್ಮನ್ನ ನಾವೇ ಬೈದುಕೋತೇವೆ-ಇಂಥಹ ನಾಯೀಗೆ ಸಿಗೋ ಸವಲತ್ತು ನಮಗೂ ಸಿಕ್ಕಿದರೆ ಅದೆಷ್ಟೋ ಜನ್ಮ ನಾಯಿಯಾಗೇ ಹುಟ್ಟೋದೂ...''

ಪೂರ್ವ ಜನ್ಮದ ಪುಣ್ಯ ಪೊಮೇರಿಯನ್ ದೋ ಹನುಮಪ್ಪದೋ-ಸಮಸ್ಯೆಗೆ ಇನ್ನೂ ಪರಿಹಾರ ಸಿಕ್ಕಿಲ್ಲ!



ತುಂತುರು

- ದಂಡಗೆ

- ದೇವರು ಮನುಷ್ಯರನ್ನು ಮಾಡಿದ. ಅವರಲ್ಲಿ ಅವನ ಆಯ್ದ ಕೆಲವರು ದುಡ್ಡು ಮಾಡುತ್ತಿದ್ದಾರೆ. ಆ ಸಂಪತ್ತನ್ನು ಪ್ರದರ್ಶಿಸುತ್ತಲೂ ಇದ್ದಾರೆ.
- ವಾರ ಭವಿಷ್ಯಕ್ಕಿಂತಲೂ ಕಾಮಿಕ್ಸ್‌ಗಳಲ್ಲೇ ಹೆಚ್ಚು ಸತ್ಯ ಇದೆ.
- ಮೀಸಲಾತಿ ಅಭ್ಯರ್ಥಿಗೆ ಜಾತಿ ಮಾತ್ರ ಇದೆ ಮೆರಿಟ್ ಇಲ್ಲ; ಮೆರಿಟ್ ಅಭ್ಯರ್ಥಿಗೆ ಮೆರಿಟ್ ಮಾತ್ರ ಇದೆ ಜಾತಿ ಇಲ್ಲ?
- ನಿಶ್ಯಬ್ದದಿಂದ ಪ್ರೇರಣೆ ಪಡೆಯದವರು ರಾಸಾಯನಿಕಗಳನ್ನು ಮೊರೆಹೊಕ್ಕು ಉತ್ತೇಜನ ಪಡೆಯಲು ಆಸಕ್ತಿ ತೋರುತ್ತಾರೆ.
- ಆಹಾರ (ಅನ್ನ) ಬ್ರಹ್ಮ ಎಂದಾದರೆ ಅದು ಗಂಡೆ? ಆಹಾರದ ಗುಣ ಪ್ರಕೃತಿ ಎಂದರೆ ಅದು ಹೆಣ್ಣೆ? ಇಲ್ಲ. ಅದು ನಿರ್ಲಿಂಗ. ಆಹಾರ ನ್ಯೂಟ್ರಲ್.
- ಮೇಧಾ ಪಾಟ್ಕರ್ ಅಥವಾ ಮೆಗಾವಾಟ್... ಯಾವುದು ಬೇಕು?
- ಪುಸ್ತಕ ಸಿದ್ಧಗೊಂಡ ಮೇಲೆ ಅದು ಬಿಕರಿಯ ಸರಕು. ಅದನ್ನು ಅತ್ಯುತ್ತಮ ರೀತಿಯಲ್ಲಿ ಪ್ರದರ್ಶಿಸಬೇಕಾಗಿ ಬರುತ್ತದೆ.
- ತಾವು ಬಳಸಿದ ಪದಗಳೇ ಬರಹಗಾರರ ಆಸ್ತಿ. ಅವುಗಳನ್ನು ಕದಿಯುವದೆಂದರೆ ಕಬ್ಬಿಣ ಪೆಟ್ಟಿಗೆಗೆ ಕನ್ನ ಹಾಕಿದಂತೆ. ಅಂದರೆ ಬರಹಗಾರನ ಮನಸ್ಸಿಗೇ ಕನ್ನ ಹಾಕಿದಂತೆ. ಅಂದಮೇಲೆ ಇನ್ನೇನು ಉಳಿದೀತು?
- ನಿದ್ದೆ ಬಾರದಿದ್ದಾಗ ಮಾಡಲೇಬಾರದ ಕೆಲಸ ಎಂದರೆ ನಿದ್ದೆ ಬರುತ್ತಿಲ್ಲವಲ್ಲ ಎಂದು ಚಿಂತಿಸುತ್ತಾ ಕೂಡುವುದು.
- ಉಪ್ಪಿನ ಮೇಲೆ ಉರಿಯುವ ಗಾಯ ಉಜ್ಜಿದರೆ...?
- If life is so unrelentingly serious why did god give us a sense of humour in the first place?

*****

CPMG / KA / BGW-544 / 2006-08 RNI-KAR KAN / 2005 / 15457
Mailing Date: 5th of every month / Mailed at Rajajinagar P.O.



Printed by: V.R. NATH for the Publisher KORAVANJI APARANJI TRUST, Published by KORAVANJI APARANJI TRUST, 36, 6th Main Road, Malleswaram, Bangalore - 560 003
Printed at: RAVI GRAPHICS, 60/2, 2nd Main Road, Industrial Town, Rajajinagar, Bangalore - 560 044. PH : 2330 5999
Editor: M. SHIVAKUMAR